# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 307 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸಿ.ಎನ್.ಮಂಜೇಗೌಡ |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 29.01.2026. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಅಬಕಾರಿ ಇಲಾಖೆಯ ಇತ್ತೀಚೆಗೆ ಕೇಳಿಬಂದ 'ವರ್ಗಾವಣೆ ದಂಧೆ' ಅಥವಾ 'ಲಂಚದ ಆರೋಪ' ಗಳ ಬಗ್ಗೆ ತನಿಖೆ ನಡೆಸಲು ಸರ್ಕಾರ ಯಾವುದಾದರೂ ಸಮಿತಿಯನ್ನು ರಚಿಸಿದೆಯೇ: | ಯಾವುದೇ ಸಮಿತಿಯನ್ನು ರಚಿಸಿರುವುದಿಲ್ಲ.<br><br>ಆದರೆ, ಅಬಕಾರಿ ಇಲಾಖೆಯಲ್ಲಿ ಪಾರದರ್ಶಕ ವರ್ಗಾವಣೆಯನ್ನು ನಡೆಸಲು ಕರ್ನಾಟಕ ನಾಗರಿಕ ಸೇವೆಗಳು (ಅಬಕಾರಿ ಇಲಾಖೆ ಅಧಿಕಾರಿ ಮತ್ತು ನೌಕರರ ವರ್ಗಾವಣೆ) ನಿಯಮಗಳು, 2025ನ್ನು ಜಾರಿಗೆ ತರಲಾಗಿರುತ್ತದೆ. ನಿಯಮಗಳನ್ವಯ ಗ್ರೂಪ್ ಸಿ ಡಿಜಿಟಲ್ ಕೌನ್ಸಿಲಿಂಗ್ ಮೂಲಕ ವರ್ಗಾವಣೆಯನ್ನು ಕೈಗೊಳ್ಳಲಾಗುತ್ತಿದೆ. ಉಳಿದ ಹಂತದ ಅಧಿಕಾರಿಗಳಿಗೂ ನಿಯಮಗಳಲ್ಲಿನ ಮಾರ್ಗಸೂಚಿಗಳನ್ವಯ ವರ್ಗಾವಣೆಗೊಳಿಸಲಾಗುತ್ತಿದೆ.<br><br>ಸನ್ನದು ಮಂಜೂರಾತಿ ಪ್ರಕ್ರಿಯೆಯಲ್ಲಿ ಹಿಂದೆ ಇದ್ದ 16 ಹಂತಗಳನ್ನು ಕೈಬಿಟ್ಟು 7 ಹಂತಗಳಿಗೆ ಮಾತ್ರ ನಿಗಧಿಗೊಳಿಸಿ, ಸನ್ನದು ಮಂಜೂರಾತಿ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಲಾಗಿದೆ.<br><br>ಸನ್ನದುಗಳ ನವೀಕರಣ ಪ್ರಕ್ರಿಯೆಯು ಆನ್‌ಲೈನ್ ಮೂಲಕ 2 ದಿನಗಳಲ್ಲಿ ಮುಕ್ತಾಯಗೊಳ್ಳುತ್ತದೆ ಮತ್ತು ಸನ್ನದು ನವೀಕರಣ ಪ್ರಕ್ರಿಯೆನ್ನು ಸರಳೀಕರಣಗೊಳಿಸಲು ಬೇಡಿಕೆಗಳು ಬಂದ ಮೇರೆಗೆ ಪ್ರಸ್ತುತ ವರ್ಷದಿಂದ ಸನ್ನದುಗಳ ನವೀಕರಣ ಪ್ರಕ್ರಿಯೆಯನ್ನು 5 ವರ್ಷಗಳಿಗೆ ನಿಗಧಿಪಡಿಸಿದೆ (Duration of Licence).<br><br>ಸನ್ನದು ನವೀಕರಣ ಸಂಬಂಧ ಅಧಿಕಾರಿಗಳು ಸನ್ನದು ತಪಾಸಣೆ ನಡೆಸುವಂತಿಲ್ಲ. ಭೌತಿಕ ದಾಖಲಾತಿಗಳನ್ನು ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಕಛೇರಿಗೆ ಸನ್ನದುದಾರರು ಬರುವ ಅವಶ್ಯಕತೆ ಇರುವುದಿಲ್ಲ.<br><br>ಅಬಕಾರಿ ಇಲಾಖೆಯು ಸಾರ್ವಜನಿಕರಿಗೆ ನೀಡುತ್ತಿರುವ ಅನೇಕ ಸೇವೆಗಳಲ್ಲಿ ಭೌತಿಕ ಕಡತಗಳನ್ನು ಪ್ರತಿಬಂಧಿಸಲಾಗಿದೆ. ಎಲ್ಲಾ ಸೇವೆಗಳನ್ನು Faceless ಅಂದರೆ Online ಮೂಲಕ ಮಾತ್ರವೇ ನೀಡುತ್ತಿದ್ದು, ಯಾವುದೇ ಸಾರ್ವಜನಿಕರು ಅಬಕಾರಿ ಇಲಾಖೆಯ ಯಾವುದೇ ಕಛೇರಿಗಳಿಗೆ ಭೌತಿಕವಾಗಿ ಭೇಟಿ ನೀಡುವ ಅಗತ್ಯವಿಲ್ಲ. ಸಾರ್ವಜನಿಕರು ತಮ್ಮ ಮನೆ ಬಾಗಿಲಿನಿಂದಲೇ ಆನ್-ಲೈನ್ ಮೂಲಕ |

| | | |
|---|---|---|
| | | ತಮಗೆ ಬೇಕಾಗಿರುವ ಸೇವೆಗಳನ್ನು ಪಡೆಯಲು ಎಲ್ಲಾ ತಾಂತ್ರಿಕ ಸೌಲಭ್ಯವನ್ನು ನೀಡಲಾಗಿರುತ್ತದೆ. Faceless Service ಅಡಿಯಲ್ಲಿ ಈಗಾಗಲೇ ಸಾಂದರ್ಭಿಕ ಸನ್ನದು (ಸಿಎಲ್-5)(Ocassional License) ನ್ನು ನೀಡಲಾಗುತ್ತಿದೆ. |
| ಆ. | ಇಲಾಖೆಯ ಉನ್ನತ ಅಧಿಕಾರಿಗಳ ವಿರುದ್ಧ ದಾಖಲಾಗಿರುವ ಶಿಸ್ತು ಪ್ರಕರಣಗಳ ಸಂಖ್ಯೆ ಎಷ್ಟು: ಕೈಗೊಂಡ ಕ್ರಮಗಳೇನು? | 2022ನೇ ಸಾಲಿನಿಂದ ಇಲಾಖೆಯ ಉನ್ನತ ಅಧಿಕಾರಿಗಳಾದ ಗ್ರೂಪ್ "ಎ" ಹಾಗೂ ಗ್ರೂಪ್ "ಬಿ" ಅಧಿಕಾರಿಗಳ ವಿರುದ್ಧ ಒಟ್ಟು 25 ಶಿಸ್ತು ಕ್ರಮದ ಪ್ರಕರಣಗಳು ದಾಖಲಾಗಿರುತ್ತದೆ. ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ. |

**ಆಇ 19 ಇಎಲ್‌ಕ್ಯೂ 2026**

**(ಆರ್.ಬಿ.ತಿಮ್ಮಾಪುರ)**
**ಅಬಕಾರಿ ಸಚಿವರು**

# ಅನುಬಂಧ

| ಕ್ರ. ಸಂ. | ಕಡತ ಸಂಖ್ಯೆ ಮತ್ತು ವಿಷಯ | ಪ್ರಕರಣದ ಹಂತವಾರು ವಿವರ |
|---|---|---|
| 1. | **ಕಡತ ಸಂಖ್ಯೆ:**<br><br>EXCISE-17011/19/2022<br>C/w<br>11014/115/2022 (Main File)<br>11014/115/2022 (Part File)<br>EXE/33/17B/BUD-7/2021-22<br><br>**ಆಪಾದಿತರ ಹೆಸರು:**<br><br>ಶ್ರೀ ಎಫ್.ಹೆಚ್. ಛಲವಾದಿ, ಅಂದಿನ ಅಬಕಾರಿ ಉಪ ಆಯುಕ್ತರು, ಬಿಯುಡಿ-7, ಹಾಲಿ ಅಬಕಾರಿ ಜಂಟಿ ಆಯುಕ್ತರು (ಜಾರಿ & ತನಿಖೆ), ಬೆಳಗಾವಿ ವಿಭಾಗ<br><br>**ವಿಷಯ:**<br>ಶ್ರೀ ಜಿ. ಪ್ರಸಾದ್ ರೆಡ್ಡಿ, ನಂ.60/1 ಖಾತಾ ನಂ.33, ಕಮ್ಮನಹಳ್ಳಿ ವಿಲೇಜ್, ಬೇಗೂರು ಹೋಬಳಿ, ಬೆಂಗಳೂರು ಇವರ ಸನ್ನದನ್ನು ನಿಯಮ ಬಾಹಿರವಾಗಿ/ಅಬಕಾರಿ ಆಯುಕ್ತರ ವಿವೇಚನೆಗೆ ಒಳಪಟ್ಟಿರುವ ನಿಯಮ 5(2) ರ ಅಧಿಕಾರ ವ್ಯಾಪ್ತಿಯನ್ನು ಮೀರಿ ಸನ್ನದನ್ನು ಸ್ಥಳಾಂತರ ಮಾಡಿರುವ ಆರೋಪ. | ಶ್ರೀ ಜಿ. ಪ್ರಸಾದ್ ರೆಡ್ಡಿ, ನಂ.60/1 ಖಾತಾ ನಂ.33, ಕಮ್ಮನಹಳ್ಳಿ ವಿಲೇಜ್, ಬೇಗೂರು ಹೋಬಳಿ, ಬೆಂಗಳೂರು ಇವರ ಸನ್ನದನ್ನು ನಿಯಮ ಬಾಹಿರವಾಗಿ/ಅಬಕಾರಿ ಆಯುಕ್ತರ ವಿವೇಚನೆಗೆ ಒಳಪಟ್ಟಿರುವ ನಿಯಮ 5(2) ರ ಅಧಿಕಾರ ವ್ಯಾಪ್ತಿಯನ್ನು ಮೀರಿ ಸನ್ನದನ್ನು ಸ್ಥಳಾಂತರ ಮಾಡಿರುವ ಆರೋಪದಡಿ ಆಪಾಧಿತರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಕಡತ ಸಂಖ್ಯೆ:ಇಎಕ್ಸ್‌ಇ/21/ಡಬ್ಲ್ಯೂಪಿ/ಬಿಯುಡಿ-7/2022 ರ ಕಂಡಿಕೆ 24 ರಲ್ಲಿ ದಿನಾಂಕ:28-05-2022 ರಂದು ಅಬಕಾರಿ ಉಪ ಆಯುಕ್ತರು, ಬೆಂಗಳೂರು ನಗರ ಜಿಲ್ಲೆ-7 ಇವರು ಶಿಫಾರಸ್ಸು ಮಾಡಿರುತ್ತಾರೆ.<br><br>ದಿನಾಂಕ:27-06-2022 ರಲ್ಲಿ ಸದರಿ ಅಧಿಕಾರಿಗಳು ಪತ್ರಾಂಕಿತ-ಎ ವೃಂದದ ಅಧಿಕಾರಿಯಾಗಿರುವುದರಿಂದ ಸದರಿಯವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಕರಡು ಕಾರಣ ಕೇಳುವ ನೋಟೀಸಿನೊಂದಿಗೆ ಅನುಬಂಧ-1 ರಿಂದ 04 ರ ಕರಡು ಪ್ರತಿಯನ್ನು ಕಳುಹಿಸಿ ಸರ್ಕಾರವನ್ನು ಕೋರಲಾಗಿತ್ತು. ಅದರಂತೆ, ದಿನಾಂಕ: 09-11-2022 ರಲ್ಲಿ ದೋಷಾರೋಪಣಾ ಪಟ್ಟಿಯನ್ನು ಜಾರಿಮಾಡಲಾಗಿರುತ್ತದೆ ಹಾಗೂ ದಿನಾಂಕ:04-02-2023 ರಲ್ಲಿ ಸದರಿಯವರು ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ.<br><br>ಅಪರ ನಿಬಂಧಕರು ವಿಚಾರಣೆಗಳು-7, ಕರ್ನಾಟಕ ಲೋಕಾ- ಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಕಂಪ್ಲೆಂಟ್ /ಲೋಕ್ /3095/ 2023 /ಎಆರ್‌ಇ.7, ದಿನಾಂಕ: 06-05-2024 ಪತ್ರದಲ್ಲಿ ಶ್ರೀ ನಾಗಮಂಗಲ ರಾಮಣ್ಣ, ನಂ.17, 10ನೇ ಎ ಕ್ರಾಸ್ ರಸ್ತೆ, ಲಗ್ಗೆರೆ ಮೇನ್ ರೋಡ್, ಲಗ್ಗೆರೆ, ಬೆಂಗಳೂರು, ರವರು ಶ್ರೀ ಎಫ್.ಹೆಚ್. ಛಲವಾದಿ, ರವರ ವಿರುದ್ಧ ದೂರನ್ನು(ಇದೇ ಪ್ರಕರಣದ ಆರೋಪ) ಸಲ್ಲಿಸಿರುತ್ತಾರೆ, ಸದರಿ ಪ್ರಕರಣದ ಕುರಿತು ಕೈಗೊಂಡ ಕ್ರಮದ ಕುರಿತು ವರದಿ ಸಲ್ಲಿಸಲು ಸೂಚಿಸಿರುತ್ತಾರೆ. ಅದರಂತೆ, ರಲ್ಲಿ ಪ್ರಕರಣದ ಪ್ರಸ್ತುತ ಹಂತದ ಮಾಹಿತಿಯನ್ನು ಮಾನ್ಯ ಲೋಕಾಯುಕ್ತರಿಗೆ ಮಾಹಿತಿ ಒದಗಿಸಲಾಗಿರುತ್ತದೆ.<br><br>ಮಾನ್ಯ ಸರ್ಕಾರದ ಆದೇಶ ಸಂಖ್ಯೆ:ಆಇ 77 ಇಪಿಎಸ್ 2022, ದಿನಾಂಕ:13-08-2024 ರಲ್ಲಿ ಅಬಕಾರಿ ಆಯುಕ್ತರನ್ನು ಶಿಸ್ತು ಪ್ರಾಧಿಕಾರಿಯನ್ನಾಗಿ ನೇಮಿಸಿ ಶಿಸ್ತು ಕ್ರಮ ಜರುಗಿಸಲು ಆದೇಶಿಸಿರುತ್ತದೆ. ಅದರಂತೆ ಮಾನ್ಯ ಅಬಕಾರಿ ಆಯುಕ್ತರು ಹಾಗೂ ಶಿಸ್ತು ಪ್ರಾಧಿಕಾರಿಗಳ ಆದೇಶ ಸಂಖ್ಯೆ:EXCISE-17011/19/2020, ದಿನಾಂಕ:20.09.2024 ರಲ್ಲಿ ಸದರಿ ಪ್ರಕರಣದ ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ. |

| | | |
|---|---|---|
| | | ಶ್ರೀ ಎಫ್.ಹೆಚ್. ಛಲವಾದಿ ಇವರು ದಿನಾಂಕ:13-08-2024 ಮತ್ತು ದಿನಾಂಕ:20-09-2024 ರ ಆದೇಶವನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ, ಬೆಳಗಾವಿ ಪೀಠ ಇಲ್ಲಿ ಅರ್ಜಿ ಸಂಖ್ಯೆ: 13327/2024 ನ್ನು ದಾಖಲಿಸಿರುತ್ತಾರೆ. ಹಾಗೂ ಮಾನ್ಯ ಕೆ.ಎಸ್.ಎ.ಟಿ ನ್ಯಾಯಾಲಯವು ದಿನಾಂಕ:13-11-2024 ರಲ್ಲಿ ಮೇಲಿನ 02 ಆದೇಶಗಳಿಗೆ ತಡೆಯಾಜ್ಞೆ ನೀಡಿರುತ್ತದೆ. ಆದ್ದರಿಂದ, ಇಲಾಖಾ ವಿಚಾರಣೆಯನ್ನು ಮುಂದುವರೆಸಲು ಸಾಧ್ಯವಾಗಿರುವುದಿಲ್ಲ.<br><br>ಈ ಕಛೇರಿಯ ಪತ್ರ ದಿನಾಂಕ:23-07-2025, ದಿನಾಂಕ:02-12-2025 ಮತ್ತು ದಿನಾಂಕ:19-12-2025 ರಲ್ಲಿ ಮಾನ್ಯ ಕೆ.ಎಸ್.ಎ.ಟಿ ಯಲ್ಲಿನ ಅರ್ಜಿ ಸಂಖ್ಯೆ:13327/2024 ರಲ್ಲಿನ ತಡೆಯಾಜ್ಞೆ ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಅಬಕಾರಿ ಉಪ ಆಯುಕ್ತರು, ಬೆಳಗಾವಿ ದಕ್ಷಿಣ ಇವರಿಗೆ ಸೂಚಿಸಲಾಗಿರುತ್ತದೆ. ಹಾಗೂ ಅಬಕಾರಿ ಉಪ ಆಯುಕ್ತರು, ಬೆಳಗಾವಿ ಜಿಲ್ಲೆ (ದಕ್ಷಿಣ), ಬೆಳಗಾವಿ ಇವರ ಪತ್ರ ದಿನಾಂಕ:11-12-2025 ರಲ್ಲಿ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ, ಬೆಳಗಾವಿ ಇಲ್ಲಿ ದಾಖಲಿಸಿರುವ ಅರ್ಜಿ ಸಂ.13327/2024 ರಲ್ಲಿ ದಿನಾಂಕ:13-11-2024 ರಂದು ನೀಡಿರುವ ತಡೆಯಾಜ್ಞೆ ತೆರವುಗೊಳಿಸಲು ಕ್ರಮವಹಿಸುವ ವಿಷಯವಾಗಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಳಗಾವಿ ಪೀಠ ಇಲ್ಲಿನ ಸರ್ಕಾರಿ ವಕೀಲರಾದ ಶ್ರೀ ಅಂಥೋನಿ ಆರ್. ರೊಡರಿಗಸ್ ಇವರನ್ನು ಸಂಪರ್ಕಿಸಿ ಚರ್ಚಿಸಲಾಗಿದೆ ಎಂದು ವರದಿಸಿರುತ್ತಾರೆ.<br><br>ಸದರಿ ಪ್ರಕರಣದಲ್ಲಿ ಹಿಂಬಾಲಿಕ ಕ್ರಮವನ್ನು ಜರುಗಿಸಲಾಗುತ್ತಿದೆ ಹಾಗೂ ಪ್ರಕರಣದಲ್ಲಿನ ತಡೆಯಾಜ್ಞೆ ತೆರವುಗೊಳಿಸಿದ ನಂತರ ಇಲಾಖಾ ವಿಚಾರಣೆಯನ್ನು ಮುಂದುವರೆಸಲಾಗುವುದು. |
| 2. | **ಕಡತ ಸಂಖ್ಯೆ:**<br><br>**ಎಕ್ಸೈಸ್/15033/52/ದೂರು/2025**<br>**ಎಕ್ಸೈಸ್-15033/52/2025 (ಭಾಗ-1)**<br><br>**ಆಪಾದಿತರ ಹೆಸರು:**<br><br>ಶ್ರೀ ಶಿವಲಿಂಗಪ್ಪ ಬನಹಟ್ಟಿ, ಅಬಕಾರಿ ಉಪ ಆಯುಕ್ತರು, ಬಿಯುಡಿ-4.<br><br>ಶ್ರೀ ಸೈಯದ್ ಶಹಬುದ್ದೀನ್ ಬುಕಾರಿ,ಅಬಕಾರಿ ಅಧೀಕ್ಷಕರು, | ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿರುವ ಅಬಕಾರಿ ಸನ್ನದಿನ ನೀಲಿ ನಕ್ಷೆಯ ಅನುಮೋದಿಸುವಲ್ಲಿ ವಿಳಂಬ ಮಾಡಿ ಕರ್ತವ್ಯ ಲೋಪವೆಸಗಿರುವ 05 ಜನ ಅಬಕಾರಿ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸಿ, ಸರ್ಕಾರದ ಆದೇಶ ಸಂಖ್ಯೆ: ಆಇ 158 ಇಪಿಎಸ್ 2025, ಬೆಂಗಳೂರು ದಿನಾಂಕ:20/08/2025 ರಲ್ಲಿ ಆಪಾದಿತರನ್ನು **ಅಮಾನತ್ತು** ಪಡಿಸಿ ಅವರ ಲೀನ್ ನ್ನು ಬೇರೆ ಜಿಲ್ಲೆಗೆ ವರ್ಗಾವಣೆ ಮಾಡಲಾಗಿರುತ್ತದೆ.<br><br>ಸದರಿ ಪ್ರಕರಣದ 05 ಜನ ಆಪಾದಿತ ಅಬಕಾರಿ ಅಧಿಕಾರಿ/ನೌಕರರು ದಿನಾಂಕ:20-08-2025 ರ ಆದೇಶವನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ:3813-3815/ 2025, 3811/2025 ಹಾಗೂ 3806/2025 ನ್ನು ದಾಖಲಿಸಿರುತ್ತಾರೆ. **ದಿನಾಂಕ:23-08-2025** ರಂದು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ:3813-3815/ 2025, 3811/2025 ಹಾಗೂ 3806/2025 ರಲ್ಲಿ ಸರ್ಕಾರದ ಆದೇಶ ದಿನಾಂಕ:20-08-2025 ಕ್ಕೆ ಮಧ್ಯಂತರ |

| | | |
|---|---|---|
| | ಅಬಕಾರಿ ಉಪ ಆಯುಕ್ತರ ಕಚೇರಿ, ಬೆಂಗಳೂರು ನಗರ ಜಿಲ್ಲೆ-04.<br><br>ಶ್ರೀ ಅಬೂಬ್ಕರ್ ಎ ಮುಜಾವರ್ ಅಬಕಾರಿ ಉಪ ಅಧೀಕ್ಷಕರು, ಉಪ ವಿಭಾಗ -07, ಬೆಂಗಳೂರು ನಗರ ಜಿಲ್ಲೆ-04.<br><br>ಶ್ರೀ ಮಧುಸೂಧನ್ ಎಲ್, ಅಬಕಾರಿ ನಿರೀಕ್ಷಕರು, ವಲಯ-22 (ಸಂಪಂಗಿರಾಮನಗರ), ಬೆಂಗಳೂರು ನಗರ ಜಿಲ್ಲೆ-04.<br><br>ಕುಮಾರಿ ಶೀತಲ್ ಸಿ, ಪ್ರಥಮ ದರ್ಜೆ ಸಹಾಯಕರು, ಅಬಕಾರಿ ಉಪ ಆಯುಕ್ತರ ಕಚೇರಿ, ಬೆಂಗಳೂರು ನಗರ ಜಿಲ್ಲೆ-04 .<br>**ವಿಷಯ**:<br><br>ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿರುವ ಅಬಕಾರಿ ಸನ್ನದಿನ ನೀಲಿ ನಕ್ಷೆಯ ಅನುಮೋದಿಸುವಲ್ಲಿ ವಿಳಂಬ ಮಾಡಿ ಕರ್ತವ್ಯ ಲೋಪವೆಸಗಿರುವ ಅಬಕಾರಿ ಅಧಿಕಾರಿ/ನೌಕರರ ವಿರುದ್ಧದ ಶಿಸ್ತು ಕ್ರಮ. | ಆದೇಶದಲ್ಲಿ **ತಡೆಯಾಜ್ಞೆ** ನೀಡಿರುತ್ತದೆ.<br><br>ದಿನಾಂಕ: 08-10-2025 ರಲ್ಲಿ ಅರ್ಜಿ ಸಂಖ್ಯೆ: :3813-3815/ 2025, 3811/2025 ಮತ್ತು ದಿನಾಂಕ:16-10-2025 ರಲ್ಲಿ 3806/2025 ಕ್ಕೆ ಸಂಬಂಧಿಸಿದಂತೆ, ಕಂಡಿಕೆವಾರು ಷರಾವನ್ನು ಸಿದ್ಧಪಡಿಸಿ ಮಾನ್ಯ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಹಾಗೂ 05 ಜನ ಆಪಾದಿತ ಅಬಕಾರಿ ಅಧಿಕಾರಿ/ನೌಕರರಿಗೆ **ದಿನಾಂಕ:24-10-2025** ರಲ್ಲಿ ದೋಷಾರೋಪಣಾ ಪಟ್ಟಿಗಳನ್ನು ಜಾರಿಮಾಡಲಾಗಿದೆ.<br>ಪ್ರಕರಣದಲ್ಲಿ ಅಬಕಾರಿ ಉಪ ಆಯುಕ್ತರಾದ ಶಿವಲಿಂಗಪ್ಪ ಬನಹಟ್ಟಿ ಇವರನ್ನು ಹೊರತುಪಡಿಸಿ, ಇನ್ನುಳಿದ 04 ಜನ ಅಧಿಕಾರಿ/ನೌಕರರು ತಮ್ಮ ದೋಷಾರೋಪಣಾ ಪಟ್ಟಿಗೆ ತಮ್ಮ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ.<br><br>**ಪ್ರಸ್ತುತ ಪ್ರಕರಣ ಪರಿಶೀಲನಾ ಹಂತದಲ್ಲಿ ಚಾಲ್ತಿಯಲ್ಲಿದೆ.** |
| 3. | **ಕಡತ ಸಂಖ್ಯೆ:**<br><br>ಎಕ್ಸೈಜ್-17011/28/2023<br><br>**ಆಪಾದಿತರ ಹೆಸರು:**<br><br>ಶ್ರೀ ಎಸ್. ಎ. ಶಂಕರಪ್ರಸಾದ್, ಅಂದಿನ ಅಬಕಾರಿ ನಿರೀಕ್ಷಕರು, ಚಿಕ್ಕಬಳ್ಳಾಪುರ ವಲಯ ಹಾಲಿ ಅಬಕಾರಿ ಉಪ ಅಧೀಕ್ಷಕರು, ಕೆ.ಜಿ.ಎಫ್ ಉಪ ವಿಭಾಗ, ಕೋಲಾರ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಕುರಿತು.<br><br>**ವಿಷಯ:**<br>ಚಿಕ್ಕಬಳ್ಳಾಪುರ ವಲಯ ಕಛೇರಿಯ ಅಬಕಾರಿ ನಿರೀಕ್ಷಕರ ಪ್ರಭಾರ ಹಾಗೂ ವಿವಿಧ ಅಬಕಾರಿ ಪ್ರಕರಣಗಳಲ್ಲಿ ಜಪ್ತಾದ ಮುದ್ದೆ ಮಾಲನ್ನು ಹಸ್ತಾಂತರಿಸದೇ ಇರುವ ಆರೋಪ . | ಅಬಕಾರಿ ಉಪ ಆಯುಕ್ತರು,ಚಿಕ್ಕಬಳ್ಳಾಪುರ ಜಿಲ್ಲೆ ಇವರ ಪತ್ರ ದಿನಾಂಕ: 30-03-2023 ರಲ್ಲಿ ಶ್ರೀ ಎಸ್. ಎ. ಶಂಕರಪ್ರಸಾದ್, ಅಂದಿನ ಅಬಕಾರಿ ನಿರೀಕ್ಷಕರು, ಚಿಕ್ಕಬಳ್ಳಾಪುರ ವಲಯ ಹಾಲಿ ಅಬಕಾರಿ ಉಪ ಅಧೀಕ್ಷಕರು, ಕೆ.ಜಿ.ಎಫ್ ಉಪ ವಿಭಾಗ, ಕೋಲಾರ ಇವರು ಚಿಕ್ಕಬಳ್ಳಾಪುರ ವಲಯ ಕಛೇರಿಯ ಅಬಕಾರಿ ನಿರೀಕ್ಷಕರ ಪ್ರಭಾರ ಹಾಗೂ ವಿವಿಧ ಅಬಕಾರಿ ಪ್ರಕರಣಗಳಲ್ಲಿ ಜಪ್ತಾದ ಮುದ್ದೆ ಮಾಲನ್ನು ಹಸ್ತಾಂತರಿಸದೇ ಇರುವ ಆರೋಪದಡಿಯಲ್ಲಿ ಸದರಿಯವರ ವಿರುದ್ಧ ಇಲಾಖಾ ವಿಚಾರಣೆಗೆ ಶಿಫಾರಸ್ಸು ಮಾಡಿರುತ್ತಾರೆ.<br>ಅದರಂತೆ, ದಿನಾಂಕ:07-05-2024 ರಲ್ಲಿ ಶ್ರೀ ಎಸ್. ಎ. ಶಂಕರಪ್ರಸಾದ್ ಇವರಿಗೆ ದೋಷಾರೋಪಣಾ ಪಟ್ಟಿಯನ್ನು ಜಾರಿಮಾಡಲಾಗಿರುತ್ತದೆ. ಹಾಗೂ ದೋಷಾರೋಪಣಾ ಪಟ್ಟಿಗೆ ದಿನಾಂಕ:15.07.2024 ರಲ್ಲಿ ಸದರಿಯವರು ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಸದರಿಯವರ ಸಮಜಾಯಿಷಿಯನ್ನು ಒಪ್ಪಲು ಸಾಧ್ಯವಿಲ್ಲದ ಕಾರಣ ದಿನಾಂಕ:07-08-2025 ರ ಅಬಕಾರಿ ಆಯುಕ್ತರ ಆದೇಶ ಹಾಗೂ ದಿನಾಂಕ:12-12-2025 ರ ತಿದ್ದುಪಡಿ ಆದೇಶದಲ್ಲಿ ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ.<br><br>**ಪ್ರಕರಣ ವಿಚಾರಣಾ ಹಂತದಲ್ಲಿ ಬಾಕಿ ಇರುತ್ತದೆ.** |

| | | |
|---|---|---|
| 4. | **ಕಡತ ಸಂಖ್ಯೆ: ಅಬಕಾರಿ-17011/31/2024.**<br><br>**ಆರೋಪಿತರ ವಿವರ:**<br><br>1. ಶ್ರೀ ಕೆ. ಅರುಣ್ ಕುಮಾರ್, ಅಬಕಾರಿ ಉಪ ಆಯುಕ್ತರು, ಬೆಳಗಾವಿ ಉತ್ತರ ಜಿಲ್ಲೆ, ಚಿಕ್ಕೋಡಿ.<br>2. ಶ್ರೀ ಕಿರಣ್ ಚಂದರಗಿ, ಅಬಕಾರಿ ನಿರೀಕ್ಷಕರು, ರಾಯಭಾಗ ವಲಯ, ರಾಯಭಾಗ, ಬೆಳಗಾವಿ ಉತ್ತರ ಜಿಲ್ಲೆ.<br><br>**ವಿಷಯ:** ಮೆ: ರತ್ನ ಎಂಟರ್ ಪ್ರೈಸಸ್ ಇವರು ಸಲ್ಲಿಸಿರುವ ಸಿಎಲ್-7 ಸನ್ನದು ಮಂಜೂರಾತಿ ಅರ್ಜಿ / ದಾಖಲಾತಿಗಳನ್ನು ನಿಯಮಾನು ಸಾರ ಪರಿಶೀಲಿಸದೇ ಅನಗತ್ಯವಾಗಿ ವಿಳಂಬ ಮಾಡಿರುವ ಬಗ್ಗೆ. | **1. ಶ್ರೀ ಕೆ. ಅರುಣ್ ಕುಮಾರ್, ಅಬಕಾರಿ ಉಪ ಆಯುಕ್ತರು, ಬೆಳಗಾವಿ ಉತ್ತರ ಜಿಲ್ಲೆ, ಚಿಕ್ಕೋಡಿ.**<br><br>**ದಿ: 14-11-2024 ರಂದು** ಅಮಾನತ್ತುಗೊಳಿಸಿ ಸರ್ಕಾರ ಆದೇಶಿಸಿರುತ್ತದೆ.<br><br>ಆಪಾದಿತರು ಸದರಿ ಆದೇಶವನ್ನು ಪ್ರಶ್ನಿಸಿ ಕೆ.ಎಸ್.ಎ.ಟಿ, ಬೆಳಗಾವಿ ಇಲ್ಲಿ ಮೇಲ್ಮನವಿ ಸಂ. 13377/2024 ಅನ್ನು ಸಲ್ಲಿಸಿರುತ್ತಾರೆ.<br><br>ಮಾನ್ಯ ನ್ಯಾಯಾಲಯವು ಅಮಾನತ್ತು ಆದೇಶಕ್ಕೆ ತಾತ್ಕಾಲಿಕ ತಡೆಯಾಜ್ಞೆ ನೀಡಿರುತ್ತದೆ.<br><br>ದಿ: 14-02-2025 ರಂದು ಕಂಡಿಕೆವಾರು ಷರಾ ನ್ಯಾಯ ಮಂಡಳಿಗೆ ಸಲ್ಲಿಸಲಾಗಿದೆ.<br><br>LCO ಸರ್ಕಾರದ ಅಧೀನ ಕಾರ್ಯದರ್ಶಿಗಳಾಗಿರುತ್ತಾರೆ.<br>**2. ಶ್ರೀ ಕಿರಣ್ ಚಂದರಗಿ, ಅಬಕಾರಿ ನಿರೀಕ್ಷಕರು, ರಾಯಭಾಗ ವಲಯ, ರಾಯಭಾಗ, ಬೆಳಗಾವಿ ಉತ್ತರ ಜಿಲ್ಲೆ.**<br><br>**ದಿ:19.10.2024 ರಂದು** ಅಮಾನತ್ತುಗೊಳಿಸಿ ಅಬಕಾರಿ ಆಯುಕ್ತರು ಆದೇಶಿಸಿರುತ್ತಾರೆ. ಆಪಾದಿತರು ಸದರಿ ಆದೇಶವನ್ನು ಪ್ರಶ್ನಿಸಿ ಕೆ.ಎಸ್.ಎ.ಟಿ, ಬೆಳಗಾವಿ ಇಲ್ಲಿ ಮೇಲ್ಮನವಿ ಸಂ. 12717/2024 ಅನ್ನು ಸಲ್ಲಿಸಿರುತ್ತಾರೆ.<br><br>ಮಾನ್ಯ ನ್ಯಾಯಾಲಯವು ಅಮಾನತ್ತು ಆದೇಶಕ್ಕೆ ತಾತ್ಕಾಲಿಕ ತಡೆಯಾಜ್ಞೆ ನೀಡಿರುತ್ತದೆ.<br><br>ದಿ: 14-02-2025 ರಂದು ರಂದು ಕಂಡಿಕೆವಾರು ಷರಾ ನ್ಯಾಯ ಮಂಡಳಿಗೆ ಸಲ್ಲಿಸಲಾಗಿದೆ.<br><br>LCO ಬೆಳಗಾವಿ ವಿಭಾಗ JC ರವರಾಗಿರುತ್ತಾರೆ.<br><br>ಮೇಲ್ಕಂಡ ಅಧಿಕಾರಿ / ನೌಕರರ ವಿರುದ್ಧದ ಆರೋಪಗಳಿಗೆ ಕರಡು ದೋಷಾರೋಪಣ ಪಟ್ಟಿ ಅಬಕಾರಿ ಜಂಟಿ ಆಯುಕ್ತರು (ಜಾರಿ ಮತ್ತು ತನಿಖೆ), ಬೆಳಗಾವಿ ರವರಿಂದ ಸ್ವೀಕೃತವಾಗಿದ್ದು, ಈ ಕಛೇರಿಯಲ್ಲಿ ಪರಿಶೀಲನಾ ಹಂತದಲ್ಲಿರುತ್ತದೆ. |

| | | |
|---|---|---|
| | | (ಆಪಾದಿತರ ವಿರುದ್ಧದ ಶಿಸ್ತು ಕ್ರಮ ಚಾಲ್ತಿಯಲ್ಲಿರುತ್ತದೆ). |
| 5. | **ಕಡತ ಸಂಖ್ಯೆ: 17011/ 7 /2024.**<br><br>**ಆರೋಪಿತರು :**<br><br>1) ಶ್ರೀ ಚಿದಾನಂದ ಮೋದಕೇಕರ, ಅನಿ, ಬೆಳಗಾವಿ ವಲಯ-1.<br><br>2) ಶ್ರೀ ರವಿ ಮುರಗೋಡು, ಅಉಅ, ಬೆಳಗಾವಿ ಉಪ ವಿಭಾಗ.<br><br>**ವಿಷಯ:** ಜಾರಿ ಮತ್ತು ತನಿಖಾ ಕಾರ್ಯದಲ್ಲಿ ಕರ್ತವ್ಯ ಲೋಪವೆಸಗಿರುವುದು ಹಾಗೂ ನಿಯಮಬಾಹೀರವಾಗಿ ಸಿಎಲ್-9 ಸನ್ನದು ಸ್ಥಳಾಂತರಕ್ಕೆ ಶಿಫಾರಸ್ಸು ಮಾಡಿರುವುದು. | ಆಪಾದಿತರುಗಳ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಕರಡು ದೋಷಾರೋಪಣ ಪಟ್ಟಿ ಅನುಬಂಧ-01 ರಿಂದ 04 ಹಾಗೂ ಅನುಬಂಧ-03 ರಲ್ಲಿನ ದಾಖಲಾತಿಗಳನ್ನು ಸಲ್ಲಿಸಲು ಅಬಕಾರಿ ಉಪ ಆಯುಕ್ತರು, ಬೆಳಗಾವಿ ದಕ್ಷಿಣ ಜಿಲ್ಲೆ ರವರಿಗೆ 06-03-2024 ಹಾಗೂ **05-10-2024** ರಂದು ನೆನಪೋಲೆ ಸಲ್ಲಿಸಲಾಗಿರುತ್ತದೆ.<br><br>**ದಿ: 06-08-2025** ರಂದು ಕರಡು ದೋಷಾರೋಪಣ ಪಟ್ಟಿ ಸ್ವೀಕೃತವಾಗಿದ್ದು,<br><br>ಅದರಂತೆ, ಆಪಾದಿತರಿಗೆ ದಿ: 08-01-2026 ರಂದು ದೋಷಾರೋಪಣ ಪಟ್ಟಿ ಜಾರಿಗೊಳಿಸಲಾಗಿರುತ್ತದೆ. ಸಮಜಾಯಿಷಿ ಸ್ವೀಕೃತವಾಗಿರುವುದಿಲ್ಲ.<br><br>(ಆಪಾದಿತರ ವಿರುದ್ಧದ ಶಿಸ್ತು ಕ್ರಮ ಚಾಲ್ತಿಯಲ್ಲಿರುತ್ತದೆ). |
| 6. | **ಕಡತ ಸಂಖ್ಯೆ: 17011/26/2024.**<br><br>**ಆರೋಪಿತರು:**<br><br>ಶ್ರೀ ಎಫ್. ಹೆಚ್. ಛಲವಾದಿ, ಅಂದಿನ ಅಬಕಾರಿ ಜಂಟಿ ಆಯುಕ್ತರು, (ಜಾ & ತ), ಮೈಸೂರು ವಿಭಾಗ ಹಾಲಿ ಅಬಕಾರಿ ಜಂಟಿ ಆಯುಕ್ತರು, (ಜಾ & ತ), ಬೆಳಗಾವಿ ವಿಭಾಗ<br><br>**ಆರೋಪ:**<br><br>ಮೆ: ಯುನೈಟೆಡ್ ಬ್ರಿವರೀಸ್ ಲಿ., ತಾಂಡ್ಯ ಕೈಗಾರಿಕಾ ಪ್ರದೇಶ, ನಂಜನಗೂಡು ತಾಲ್ಲೂಕು ಇಲ್ಲಿ ಉತ್ಪಾದನೆಯಾಗಿ ಕೇರಳ ರಾಜ್ಯಕ್ಕೆ ರಫ್ತು ಮಾಡಲು ಪರ್ಮಿಟ್ ನೀಡಲಾಗಿದ್ದ ವಿವಿಧ ಬ್ರಾಂಡಿನ ಬಿಯರ್ ದಾಸ್ತಾನನ್ನು ಸಾಗಾಣಿಕೆ ಮಾಡಿದ ನಂತರ ಮರಳಿ ಬ್ರೀವರಿ ಸನ್ನದು ಆವರಣಕ್ಕೆ ಹಿಂದಿರುಗಿಸಿ ವೇರ್‌ಹೌಸ್ ಲೆಕ್ಕಕ್ಕೆ ತೆಗೆದುಕೊಂಡಿರುತ್ತಾರೆ ಎಂಬುದಾಗಿದ್ದು, ಅಬಕಾರಿ ಉಪ ಆಯುಕ್ತರು, ಚಾಮರಾಜನಗರ ಜಿಲ್ಲೆ ಇವರಿಂದ ದಿನಾಂಕ: 02-04-2024 ರಂದು ಸ್ವೀಕೃತವಾದ ದೂರಿನ ಸಂಬಂಧ ಮೆ: ಯುನೈಟೆಡ್ ಬ್ರೀವರೀಸನ್ನು ಪರಿಶೀಲಿಸಿ | ಸರ್ಕಾರದ ಆದೇಶ ಸಂ. ಆಇ 195 ಇಪಿಎಸ್ 2024, ಬೆಂಗಳೂರು, ದಿನಾಂಕ: 24-01-2025 ರಲ್ಲಿ ಆಪಾದಿತರ ವಿರುದ್ಧದ ಕರ್ತವ್ಯಲೋಪಕ್ಕಾಗಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗ ನಿಯಮ 11 ರನ್ವಯ ಅಬಕಾರಿ ಆಯುಕ್ತರನ್ನು ಪ್ರಕರಣದ ಶಿಸ್ತು ಪ್ರಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿರುತ್ತದೆ.<br><br>ಅದರಂತೆ, ಆಪಾದಿತರಿಗೆ ದಿನಾಂಕ: 04-03-2024 ರಂದು ದೋಷಾರೋಪಣ ಪಟ್ಟಿ ಅನುಬಂಧ-01 ರಿಂದ 04 ಅನ್ನು ಹಾಗೂ ಅನುಬಂಧ-03 ರಲ್ಲಿನ ದಾಖಲಾತಿಗಳನ್ನು ಜಾರಿಗೊಳಿಸಲಾಗಿರುತ್ತದೆ.<br><br>ಸದರಿ ದೋಷಾರೋಪಣ ಪಟ್ಟಿಯನ್ನು ಪ್ರಶ್ನಿಸಿ ಆಪಾದಿತರು ಮಾನ್ಯ ಕೆ.ಎಸ್.ಎ.ಟಿ, ಬೆಳಗಾವಿ ಇಲ್ಲಿ ಮೇಲ್ಮನವಿ ಅರ್ಜಿ ಸಂ. 10404/2025 ಅನ್ನು ಸಲ್ಲಿಸಿರುತ್ತಾರೆ.<br><br>(ದಿ: 24-06-2025 ರಂದು ದೋಷಾರೋಪಣ ಪಟ್ಟಿ ತಡೆಯಾಜ್ಞೆ ಪಡೆದಿರುತ್ತಾರೆ).<br><br>ಪ್ರಕರಣ ಮಾನ್ಯ ಕೆ.ಎಸ್.ಎ.ಟಿ, ಬೆಳಗಾವಿ ಇಲ್ಲಿ ವಿಚಾರಣಾ ಹಂತದಲ್ಲಿರುತ್ತದೆ.<br><br>ಕಂಡಿಕೆವಾರು ಷರಾವನ್ನು ಸಿದ್ಧಪಡಿಸಿ ಮಾನ್ಯ ಕೆ.ಎಸ್.ಎ.ಟಿ, ಬೆಳಗಾವಿ ಇಲ್ಲಿಗೆ ಸಲ್ಲಿಸಲಾಗಿರುತ್ತದೆ. |

| | | |
|---|---|---|
| | ಘೋರ ಮೊಕದ್ದಮೆಯನ್ನು ದಾಖಲಿಸುವ ಸಂಬಂಧ ಕರ್ತವ್ಯ ಲೋಪವೆಸಗಿ ಬೇಜವಾಬ್ದಾರಿತನದ ನಡವಳಿಕೆಗಾಗಿ ಇಲಾಖಾ ವಿಚಾರಣೆ ಕೈಗೊಳ್ಳುವ ಬಗ್ಗೆ. | **(ಆಪಾದಿತರ ವಿರುದ್ಧದ ಶಿಸ್ತು ಕ್ರಮ ಚಾಲ್ತಿಯಲ್ಲಿರುತ್ತದೆ).** |
| 7. | **ಕಡತ ಸಂ. ಇಸಿಇ/01/ಮಂಗಳೂರು ವಿಭಾಗ/ ಡಿಎಸ್‌ಸಿ(3) /2020**<br>**(ಇ-ಆಫೀಸ್ ಕಡತ ಸಂ.17011/8/2020).**<br><br>**ಆರೋಪಿತರುಗಳು:**<br><br>ಶ್ರೀ ಹೆಚ್. ಎಸ್. ಶಿವಪ್ಪ, ಅಬಕಾರಿ ಉಪ ಅಧೀಕ್ಷಕರು, ಸೋಮವಾರಪೇಟೆ ಉಪ ವಿಭಾಗ., ಸೋಮವಾರಪೇಟೆ, ಕೊಡಗು ಜಿಲ್ಲೆ.<br><br>ಶ್ರೀ ಎಂ. ನಟರಾಜ್ ಅ.ನಿ., ಸೋಮವಾರಪೇಟೆ ವಲಯ, ಕೊಡಗು ಜಿಲ್ಲೆ.<br><br>**ವಿಷಯ:-**<br>ಶ್ರೀ ಹೆಚ್. ಎಸ್. ಶಿವಪ್ಪ, ಅಬಕಾರಿ ಉಪ ಅಧೀಕ್ಷಕರು, ಹಾಗೂ ಶ್ರೀ ಎಂ. ನಟರಾಜ್ ಅಬಕಾರಿ ನಿರೀಕ್ಷಕರು - ಇವರುಗಳು ಸಾರ್ವಜನಿಕವಾಗಿ ಪರಸ್ಪರ ಹಲ್ಲೆ ಮಾಡಿಕೊಂಡಿರುವುದು ಟಿ.ವಿ. ಮಾಧ್ಯಮಗಳಲ್ಲಿ ಬಿತ್ತರಗೊಂಡ ಕಾರಣ ಸದರಿಯರುಗಳ ವಿರುದ್ಧದ ಕರ್ತವ್ಯಲೋಪ ಹಾಗೂ ದುರ್ನಡತೆಗಾಗಿ ಶಿಸ್ತು ಕ್ರಮ ಜರುಗಿಸುವ ಬಗ್ಗೆ. | ಆಪಾದಿತರುಗಳಿಗೆ ದಿ: 25-02-2021 ರಂದು ದೋಷಾರೋಪಣ ಪಟ್ಟಿ ಜಾರಿಗೊಳಿಸಲಾಗಿದೆ.<br><br>ಸಮಜಾಯಿಷಿ ಸ್ವೀಕೃತವಾದ ನಂತರ ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿಸಯಲು ಅಬಕಾರಿ ಆಯುಕ್ತರ ಆದೇಶ ಸಂ. ಎಕ್ಸೈಜ್-17011/ 8 /2020, ದಿ: 19-07-2022 ರಲ್ಲಿ ಪ್ರಕರಣವನ್ನು ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ.<br><br>ದಿ: 15-07-2025 ರಂದು ವಿಚಾರಣಾ ವರದಿ ಸ್ವೀಕೃತವಾಗಿರುತ್ತದೆ.<br><br>ಈ ಸಂಬಂಧ ಕಡತ ಚಾಲನೆಯಲ್ಲಿರುತ್ತದೆ.<br><br>(ಆಪಾದಿತರ ವಿರುದ್ಧದ ಶಿಸ್ತು ಕ್ರಮ ಚಾಲ್ತಿಯಲ್ಲಿರುತ್ತದೆ). |
| 8. | **ಕಡತ ಸಂಖ್ಯೆ: 17011/ 6 /2023.**<br><br>**ಆರೋಪಿತರು :**<br><br>ಶ್ರೀ ಹೆಚ್. ಎಸ್. ಶಿವಪ್ಪ,<br>ಅಬಕಾರಿ ಉಪ ಅಧೀಕ್ಷಕರು,<br>ಸೋಮವಾರಪೇಟೆ ಉಪ ವಿಭಾಗ, ಕೊಡಗು ಜಿಲ್ಲೆ.<br><br>**ಆರೋಪ:** | ಅಬಕಾರಿ ಆಯುಕ್ತರ ಪ್ರಾಧಿಕಾರವು ದಿನಾಂಕ: 05-03-2024 ರಂದು ತಿಳುವಳಿಕೆ ಪತ್ರದೊಂದಿಗೆ ದೋಷಾರೋಪಣ ಪಟ್ಟಿಯನ್ನು ದಿ: 28-03-2024 ರಂದು ಜಾರಿಗೊಳಿಸಲಾಗಿರುತ್ತದೆ.<br><br>ಸಮಜಾಯಿಷಿ ಸ್ವೀಕೃತವಾಗದ ಕಾರಣ ದಿನಾಂಕ: 27-08-2024 ರಂದು ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ.<br><br>ದಿ: 26-03-2025 ರಂದು ವಿಚಾರಣಾ ವರದಿ ಸ್ವೀಕೃತವಾಗಿರುತ್ತದೆ.<br>ಸದರಿ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪವು ಸಾಬೀತಾಗಿರುತ್ತದೆ ಎಂದು ವರದಿ ನೀಡಿರುತ್ತಾರೆ. |

| | | |
|---|---|---|
| | ದಿನಾಂಕ: 31-08-2020 ರಿಂದ 06-02-2022 ರ ವರೆಗೆ ಕರ್ತವ್ಯಕ್ಕೆ ಹಾಜರಾಗದೇ ಕರ್ತವ್ಯ ನಿರ್ಲಕ್ಷ್ಯತೆ ಹಾಗೂ ದುರ್ನಡತೆ ಎಸಗಿರುವ ಕುರಿತು ಶಿಸ್ತು ಕ್ರಮ. | ದಿ: 25-06-2025 ರಂದು ಆರೋಪಿತರಿಗೆ 2 ನೇ ಕಾರಣ ಕೇಳಿ ನೋಟೀಸ ಜಾರಿಗೊಳಿಸಲಾಗಿರುತ್ತದೆ.<br><br>ಆಪಾದಿತರು ಸಮಜಾಯಿಷಿ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಬೇಕೆಂದು ಕೋರಿರುತ್ತಾರೆ.<br><br>ಈ ಪತ್ರ ತಲುಪಿದ ನಂತರ, ಒಂದು ವಾರದಲ್ಲಿ ಸಮಜಾಯಿಷಿ ಸಲ್ಲಿಸಲು **ದಿ: 20-08-2025** ರ ಪತ್ರದಲ್ಲಿ ಕಾಲಾವಕಾಶ ನೀಡಲಾಗಿರುತ್ತದೆ.<br><br>ತದನಂತರ, ದಿ: 17-09-2025 ರಂದು ಸಮಜಾಯಿಷಿ ಸಲ್ಲಿಸಿರುತ್ತಾರೆ. ಈ ಸಂಬಂಧ ಕಡತ ಚಾಲನೆಯಲ್ಲಿರುತ್ತದೆ.<br><br>**(ಆಪಾದಿತರ ವಿರುದ್ಧದ ಶಿಸ್ತು ಕ್ರಮ ಚಾಲ್ತಿಯಲ್ಲಿರುತ್ತದೆ)** |
| 9. | ಕಡತ ಸಂ. 17011/11/2024/ಡಿಎಸ್‌ಸಿ / ಮಂ.ವಿ.<br><br>**ಆರೋಪಿತರು:**<br>ಹೆಚ್. ಎಸ್. ಶಿವಪ್ಪ, ಅಬಕಾರಿ ಉಪ ಅಧೀಕ್ಷಕರು, ಶಿರಸಿ ಉಪ ವಿಭಾಗ, ಉತ್ತರ ಕನ್ನಡ ಜಿಲ್ಲೆ<br><br>**ವಿಷಯ:**<br>ಕಛೇರಿ ಸಿಬ್ಬಂದಿಗಳಿಗೆ ಕಿರುಕುಳ ನೀಡುತ್ತಿರುವ ಬಗ್ಗೆ ಹಾಗೂ ಕಛೇರಿ ಕೆಲಸಕ್ಕೆ ಅನಧಿಕೃತ ಗೈರು ಹಾಜರಾಗುತ್ತಿರುವ ಬಗ್ಗೆ ಮತ್ತು ಮೇಲಾಧಿಕಾರಿಗಳ ಆದೇಶ ಪಾಲನೆ ಮಾಡದೇ ಕರ್ತವ್ಯಲೋಪವೆಸಗಿರುವ ಕುರಿತು. | ಅಬಕಾರಿ ಉಪ ಆಯುಕ್ತರು, ಉತ್ತರ ಕನ್ನಡ ಜಿಲ್ಲೆ ಇವರು ದಿ: 12-01-2024 ಮತ್ತು 01-06-2024 ರಲ್ಲಿ ಸದರಿ ಅಬಕಾರಿ ಉಪ ಅಧೀಕ್ಷಕರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಶಿಸ್ತು ಕ್ರಮ ಜರುಗಿಸಲು ಶಿಫಾರಸ್ಸು ಮಾಡಿರುತ್ತಾರೆ.<br><br>ಈ ಸಂಬಂಧ ಸದರಿ ಅಧಿಕಾರಿಗೆ ದಿ: 10-07-2024 ರಂದು ಕಾರಣ ಕೇಳಿ ನೋಟೀಸ್ ನೀಡಲಾಗಿರುತ್ತದೆ.<br><br>ಆರೋಪಿತ ಅಧಿಕಾರಿಯು ದಿ: 26-07-2024 ರ ಪತ್ರದಲ್ಲಿ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅಗತ್ಯ ದಾಖಲಾತಿಗಳನ್ನು ಒದಗಿಸಲು ಕೋರಿರುತ್ತಾರೆ.<br><br>ಅದರಂತೆ, ಸದರಿ ಅಧಿಕಾರಿಯು ಕೋರಿರುವ ದಾಖಲಾತಿಗಳನ್ನು ಒದಗಿಸಿ ಈ ಕಛೇರಿಗೆ ವರದಿಸಲು ಅಬಕಾರಿ ಉಪ ಆಯುಕ್ತರು, ಉತ್ತರ ಕನ್ನಡ ಜಿಲ್ಲೆ, ರವರಿಗೆ ದಿ: 23-09-2024 ರಲ್ಲಿ ಸೂಚಿಸಲಾಗಿರುತ್ತದೆ.<br><br>ಸದರಿ ಅಬಕಾರಿ ಉಪ ಆಯುಕ್ತರಿಂದ ಯಾವುದೇ ಅನುಸರಣಾ ವರದಿ ಸ್ವೀಕೃತವಾಗದ ಕಾರಣ **ದಿ: 26-12-2024** ರಂದು ನೆನಪೋಲೆ ಸಲ್ಲಿಸಲಾಗಿರುತ್ತದೆ.<br><br>ಅದರಂತೆ, ಆಪಾದಿತರ ವಿರುದ್ಧದ ಆರೋಪಗಳಿಗಾಗಿ ಕರಡು ದೋಷಾರೋಪಣ ಪಟ್ಟಿ ಹಾಗೂ ಅಗತ್ಯ ದಾಖಲಾತಿಗಳನ್ನು ಅಬಕಾರಿ ಉಪ ಆಯುಕ್ತರು, ಉತ್ತರ ಕನ್ನಡ ಜಿಲ್ಲೆ ರವರು ಸಲ್ಲಿಸಿರುತ್ತಾರೆ.<br><br>ದಿ: 21-01-2026 ರಂದು ದೋಷಾರೋಪಣ ಪಟ್ಟಿಯನ್ನು ಆರೋಪಿತರಿಗೆ |

| | | |
|---|---|---|
| | | ಜಾರಿಗೊಳಿಸಲಾಗಿರುತ್ತದೆ.<br><br>**(ಆಪಾದಿತರ ವಿರುದ್ಧದ ಶಿಸ್ತು ಕ್ರಮ ಚಾಲ್ತಿಯಲ್ಲಿರುತ್ತದೆ).** |
| 10. | **ಕಡತ ಸಂಖ್ಯೆ: ಅಬಕಾರಿ – 17011 / 02 /2023.**<br><br>**ಆಪಾದಿತರು :**<br>ಶ್ರೀ ಸಂತೋಷ್ ಎಂ ಕುಡಾಳಕರ್, ಅಬಕಾರಿ ಅಧೀಕ್ಷಕರು, ಅಬಕಾರಿ ಉಪ ಆಯುಕ್ತರ ಕಛೇರಿ, ಉತ್ತರ ಕನ್ನಡ ಜಿಲ್ಲೆ, ಕಾರವಾರ.<br><br>**ಆರೋಪ:**<br>ಅಬಕಾರಿ ಉಪ ಆಯುಕ್ತರು, ಉತ್ತರ ಕನ್ನಡ ಜಿಲ್ಲೆ, ಕಾರವಾರ ಇವರ ಆದೇಶ ಪಾಲನೆ ಮಾಡದೇ ಕರ್ತವ್ಯ ನಿರ್ವಹಣೆಯಲ್ಲಿ, ನಿರ್ಲಕ್ಷ್ಯತನ, ದುರ್ನಡತೆ ತೋರಿರುವುದು, ಮೇಲಾಧಿಕಾರಿಗಳ ಅನುಮತಿ ಇಲ್ಲದೇ ಕಛೇರಿಯಲ್ಲಿ ಸನ್ನದುದಾರರ ಸಭೆಗೆ ಅವಕಾಶ ನೀಡಿರುವುದು ಹಾಗೂ ಅಧೀನ ಕಛೇರಿ ಸಿಬ್ಬಂದಿಗಳಿಗೆ ಕರ್ತವ್ಯ ನಿರ್ವಹಣೆಯಲ್ಲಿ ಕಿರುಕುಳ ನೀಡುತ್ತಿರುವುದು ಮತ್ತು ಡಿ.ಗ್ರೂಪ್ ನೌಕರರು ಮಹಿಳಾ ಪೊಲೀಸ್ ಠಾಣೆಯಲ್ಲಿ ಸದರಿ ಅಬಕಾರಿ ಅಧೀಕ್ಷಕರ ವಿರುದ್ಧ ಲೈಂಗಿಕ ಕಿರುಕುಳ ಪ್ರಕರಣ ದಾಖಲಿಸಿರುವ ಬಗ್ಗೆ, ಶಿಸ್ತು ಕ್ರಮ. | ಆಪಾದಿತರ ವಿರುದ್ಧದ ಆರೋಪ ಹಾಗೂ ದೂರುಗಳಿಗೆ ಸಂಬಂಧಿಸಿದಂತೆ ಶಿಸ್ತು ಕ್ರಮ ಜರುಗಿಸಲು ಕರಡು ದೋಷಾರೋಪಣ ಪಟ್ಟಿ ಅನುಬಂಧ-1 ರಿಂದ 4 ಹಾಗೂ ಅನುಬಂಧ-03 ರಲ್ಲಿ ದಾಖಲಾತಿಗಳೊಂದಿಗೆ ಆಪಾದಿತರನ್ನು ಅಮಾನತ್ತಿನಲಿಟ್ಟು ಅವರ ಲೀನ್ ಅನ್ನು ಖಾಲಿ ಇರುವ ಇತರೆ ಜಿಲ್ಲೆಗೆ ವರ್ಗಾಯಿಸುವಂತೆ ಸಕ್ಷಮ ಪ್ರಾಧಿಕಾರಿಯಾದ ಸರ್ಕಾರವನ್ನು ದಿ: 17-04-2023 ರ ಈ ಕಛೇರಿ ಪತ್ರದಲ್ಲಿ ಕೋರಲಾಗಿದೆ.<br><br>ಈ ಕುರಿತು ಸರ್ಕಾರವು ಸದರಿ ಅಧಿಕಾರಿಯನ್ನು ಅಮಾನತ್ತಿನಲ್ಲಿಡಲು ಸೂಕ್ತ ಸ್ಪಷ್ಟೀಕರಣ ಸಲ್ಲಿಸುವಂತೆ ಸೂಚಿಸಿರುತ್ತದೆ.<br><br>ಈ ಸಂಬಂಧ ದಿನಾಂಕ: 22-11-2023 ರಂದು ಸರ್ಕಾರಕ್ಕೆ ವರದಿ ಸಲ್ಲಿಸಲಾಗಿರುತ್ತದೆ.<br><br>ಸರ್ಕಾರವು ದಿ: 08-11-2024 ರ ಪತ್ರದಲ್ಲಿ ಸದರಿ ಅಧಿಕಾರಿಯ ವಿರುದ್ಧದ ಆರೋಪಕ್ಕೆ ಶಿಸ್ತು ಕ್ರಮ ಕೈಗೊಳ್ಳುವ ಸಂಬಂದ ಮತ್ತೊಮ್ಮೆ ಪರಿಶೀಲಿಸಿ ಸ್ಪಷ್ಟವಾದ ವರದಿ ಸಲ್ಲಿಸಲು ಸೂಚಿಸಿರುತ್ತದೆ.<br><br>ಅದರಂತೆ, ಪರಿಶೀಲಿಸಲ್ಪಟ್ಟ ಸ್ಪಷ್ಟ ವರದಿಯನ್ನು ದಿ: 17-07-2025 ರಂದು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.<br><br>ಸರ್ಕಾರವು ಆಪಾದಿತರ ವಿರುದ್ಧದ ಆರೋಪಗಳಿಗಾಗಿ ದಿನಾಂಕ: 30-08-2025 ರ ಆದೇಶದಲ್ಲಿ ಅಮಾನತ್ತುಗೊಳಿಸಿ ಆದೇಶಿಸಿರುತ್ತದೆ ಹಾಗೂ ಅಬಕಾರಿ ಆಯುಕ್ತರನ್ನು ಶಿಸ್ತು ಪ್ರಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿರುತ್ತದೆ.<br><br>ಸದರಿ ಆದೇಶವು ದಿನಾಂಕ: 31-08-2025 ರಂದು ಜಾರಿಗೊಳಿಸಲಾಗಿರುತ್ತದೆ. ಸ್ವೀಕೃತಿಯನ್ನು ಸರ್ಕಾರಕ್ಕೆ ಸಲ್ಲಿಸುವ ಸಂಬಂಧ ಕಡತ ಚಾಲನೆಯಲ್ಲಿರುತ್ತದೆ.<br><br>ಅನುಬಂಧ-01 ರಿಂದ 04 ಅನ್ನು ಜಾರಿಗೊಳಿಸಲಾಗಿರುತ್ತದೆ. ಈ ಸಂಬಂದ ಆಪಾದಿತರು ದಿ: 04-12-2025 ರಂದು ಸಮಜಾಯಿಷಿ ಸಲ್ಲಿಸಿರುತ್ತಾರೆ. ಕಡತ ಚಾಲನೆಯಲ್ಲಿರುತ್ತದೆ.<br><br>**(ಆಪಾದಿತರ ವಿರುದ್ಧದ ಶಿಸ್ತು ಕ್ರಮ ಚಾಲ್ತಿಯಲ್ಲಿರುತ್ತದೆ).** |

| | | |
|---|---|---|
| 11. | **ಕಡತ ಸಂಖ್ಯೆ: 17011/17/2024.**<br><br>**ಆರೋಪಿತರ :**<br>1) ಶ್ರೀ ಜಿ.ವಿ. ವಿಜಯ್ ಕುಮಾರ್, ಅಬಕಾರಿ ಉಪ ಅಧೀಕ್ಷಕರು, ಹಾಸನ ಉಪ ವಿಭಾಗ.<br>2) ಶ್ರೀ ಎಂ.ಆರ್.ಶೇಖರ್, ಅನಿ, ಹಾಸನ ವಲಯ-1, ಹಾಸನ.<br><br>**ಆರೋಪ:**<br>ಡಿಸ್ಟಿಲರಿ ಅನುಮೋದಿತ ಆವರಣದಲ್ಲಿ ಬ್ರೀವರಿ ದಾಸ್ತಾನು ಒಟ್ಟು: 56,236 ರಟ್ಟಿನ ಪೆಟ್ಟಿಗೆಗಳ ಬಿಯರ್ ಅನ್ನು ಅನಧಿಕೃತವಾಗಿ ಸಂಗ್ರಹಿಸಿಟ್ಟಿರುವ ಬಗ್ಗೆ ಶಿಸ್ತು ಕ್ರಮ ಜರುಗಿಸುವ ಕುರಿತು.<br><br>(ಮೆ:ವುಡ್ ಪೆಕರ್ ಡಿಸ್ಟಿಲರೀಸ್ & ಬ್ರೀವರೀಸ್ ಪ್ರೈ.ಲಿ., ಹಾಸನ ಜಿಲ್ಲೆ, ಹಾಸನ). | **ಶ್ರೀ ಎಂ.ಆರ್.ಶೇಖರ್, ಅನಿ,** ಹಾಸನ ವಲಯ-1, ಹಾಸನ ಇವರನ್ನು ಅಬಕಾರಿ ಜಂಟಿ ಆಯುಕ್ತರು (ಜಾ ಮ ತ), ಮೈಸೂರು ವಿಭಾಗ ರವರು ದಿ: 15-04-2024 ರ ಆದೇಶದಲ್ಲಿ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿರುತ್ತಾರೆ.<br><br>ಸದರಿ ಅಮಾನತ್ತು ಆದೇಶವನ್ನು ಪ್ರಶ್ನಿಸಿ ಆಪಾದಿತರು ಮೇಲ್ಮನವಿ ಪ್ರಾಧಿಕಾರಿಗಳಾದ ಅಬಕಾರಿ ಆಯುಕ್ತರಿಗೆ ದಿನಾಂಕ: 17-04-2024 ರಂದು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.<br>ಸದರಿ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿಗಳಾದ ಅಬಕಾರಿ ಆಯುಕ್ತರು, ದಿನಾಂಕ: 08-05-2024 ರ ಆದೇಶಲ್ಲಿ ಅಬಕಾರಿ ಜಂಟಿ ಆಯುಕ್ತರು ( ಜಾ ಮ ತ), ಮೈಸೂರು ವಿಭಾಗ ರವರ ದಿ: 15-04-2024 ರ ಆದೇಶವನ್ನು ರದ್ದುಗೊಳಿಸಿ ಆದೇಶಿಸಿರುತ್ತಾರೆ.<br><br>**ಶ್ರೀ ಜಿ.ವಿ. ವಿಜಯ್ ಕುಮಾರ್, ಅಬಕಾರಿ ಉಪ ಅಧೀಕ್ಷಕರು,** ಹಾಸನ ಉಪ ವಿಭಾಗ ಇವರ ವಿರುದ್ಧದ ಆರೋಪಕ್ಕಾಗಿ ದಿ: 06-05-2024 ರಂದು ಅಬಕಾರಿ ಆಯುಕ್ತರಿಂದ ಕಾರಣ ಕೇಳಿ ನೋಟೀಸ್ ಜಾರಿಗೊಳಿಸಲಾಗಿರುತ್ತದೆ.<br><br>ಆಪಾದಿತರು ದಿ:18-05-2024 ರಂದು ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ.<br><br>ಆಪಾದಿತರ ವಿರುದ್ಧದ ಆರೋಪಗಳಿಗಾಗಿ ಅಬಕಾರಿ ಜಂಟಿ ಆಯುಕ್ತರು (ಜಾ ಮ ತ) ಮೈಸೂರು ವಿಭಾಗ ರವರು ದಿ: 14-07-2025 ರಂದು ಕರಡು ದೋಷಾರೋಪಣ ಪಟ್ಟಿ ಅನುಬಂಧ-01 ರಿಂದ 04 ಅನ್ನು ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಕಛೇರಿಗೆ ಸಲ್ಲಿಸಿರುತ್ತಾರೆ.<br>ಅದರಂತೆ, ಪರಿಷ್ಕೃತ ದೋಷಾರೋಪಣ ಪಟ್ಟಿ ಅನುಬಂಧ-01 ರಿಂದ 04 ಅನ್ನು ಹಾಗೂ ಅನುಬಂಧ-03 ರಲ್ಲಿನ ದಾಖಲಾತಿಗಳನ್ನು ದಿನಾಂಕ: 24-08-2025 ರಂದು ಆಪಾದಿತರಿಗೆ ಜಾರಿಗೊಳಿಸಲಾಗಿರುತ್ತದೆ. ಸಮಜಾಯಿಷಿ ದಿ: 11-09-2025 ರಂದು ಸಲ್ಲಿಸಿದ್ದು, ಈ ಸಂಬಂಧ ಕಡತ ಚಾಲನೆಯಲ್ಲಿರುತ್ತದೆ.<br><br>**(ಆಪಾದಿತರ ವಿರುದ್ಧದ ಶಿಸ್ತು ಕ್ರಮ ಚಾಲ್ತಿಯಲ್ಲಿರುತ್ತದೆ).** |
| 12. | **ಎಕ್ಸೈಸ್-17011/54/2023.**<br><br>**ಶ್ರೀಮತಿ ಸ್ವಪ್ನ ಆರ್. ಎಸ್. ಅಬಕಾರಿ ಉಪ ಆಯುಕ್ತರು, ದಾವಣಗೆರೆ ಜಿಲ್ಲೆ** ಇವರನ್ನು ಕರ್ತವ್ಯದಿಂದ ಅಮಾನತ್ತುಗೊಳಿಸುವ ಬಗ್ಗೆ. | ➢ ಶ್ರೀಮತಿ ಸ್ವಪ್ನ ಆರ್. ಎಸ್. ಅಬಕಾರಿ ಉಪ ಆಯುಕ್ತರು, ದಾವಣಗೆರೆ ಜಿಲ್ಲೆ ಇವರು ಲೋಕಾಯುಕ್ತ ಪ್ರಕರಣದಲ್ಲಿ 48 ಗಂಟೆಗಳಿಗೂ ಮೀರಿ ನ್ಯಾಯಾಂಗ ಬಂಧನದಲ್ಲಿದ್ದು, ದಿನಾಂಕ:04-12-2023 ರಂದು ಅಬಕಾರಿ ಉಪ ಆಯುಕ್ತರ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.<br>➢ ದಿನಾಂಕ:28-11-2023 ರಲ್ಲಿ ಸದರಿಯವರಿಗೆ ಕಾರಣ ಕೇಳುವ ನೋಟೀಸ್ ಅನ್ನು |

| | | |
|---|---|---|
| | ➤ **ಆರೋಪ:** ಲೋಕಾಯುಕ್ತ ಪ್ರಕರಣದಲ್ಲಿ 48 ಗಂಟೆಗಳಿಗೂ ಮೀರಿ ನ್ಯಾಯಾಂಗ ಬಂಧನದಲ್ಲಿದ್ದು, ತದನಂತರ, ಯಾವುದೇ ಇಲಾಖಾ ಅನುಮತಿ ಪಡೆಯದೇ ದಿನಾಂಕ:04-12-2023 ರಂದು ಅಬಕಾರಿ ಉಪ ಆಯುಕ್ತರ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾಗಿರುವುದರಿಂದ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಕುರಿತು. | ನೀಡಲಾಗಿರುತ್ತದೆ.<br><br>➤ ದಿನಾಂಕ:24-12-2024 ರಲ್ಲಿ ಸದರಿಯವರಿಗೆ ಅನುಬಂಧ-01 ರಿಂದ 04 ರವರೆಗಿನ ದೋಷಾರೋಪಣಾ ಪಟ್ಟಿಯನ್ನು ಜಾರಿಮಾಡಲಾಗಿರುತ್ತದೆ.<br><br>➤ ಸದರಿಯವರು ದಿನಾಂಕ:28-04-2025 ರಲ್ಲಿಅನುಬಂಧ-01 ರಿಂದ 04 ರವರೆಗಿನ ದೋಷಾರೋಪಣಾ ಪಟ್ಟಿಗೆ ಸಂಬಂಧಿಸಿದಂತೆ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ.<br><br>➤ ಸದರಿ ಅಧಿಕಾರಿಯವರು ಸಲ್ಲಿಸಿರುವ ವಿವರಣೆಯನ್ನು ಒಪ್ಪಲು ಸಾಧ್ಯವಿಲ್ಲ ಎಂದು ಅಬಕಾರಿ ಆಯುಕ್ತರು ವಿಚಾರಣೆಗೆ ಆದೇಶಿಸಿರುತ್ತಾರೆ.<br><br>**(ಪ್ರಕರಣದ ವಿಚಾರಣೆ ಚಾಲ್ತಿಯಲ್ಲಿರುತ್ತದೆ).** |
| 13. | **ಕಡತ ಸಂಖ್ಯೆ: EXCISE-17011/12/2022-**<br><br>**ಆಪಾದಿತರ ಹೆಸರು:** ಶ್ರೀ ದೊಡ್ಡಪ್ಪ ಹೆಬಳೆ, ಅಬಕಾರಿ ಉಪ ಅಧೀಕ್ಷಕರು,<br><br>**ವಿಷಯ:** ಅಧಿಕಾರವಿಲ್ಲದೆ ಇದ್ದವರು ಸ್ವದೇಶಿ ಮದ್ಯದ ಸನ್ನದುದಾರರಿಗೆ ನೌಕರನಾಮಾ ಜಾರಿಗೊಳಿಸಿರುವ ಆರೋಪ | ಅಬಕಾರಿ ಉಪ ಆಯುಕ್ತರು, ಕಲಬುರಗಿ ಜಿಲ್ಲೆ ಇವರು ಆಪಾದಿತರು ಕರ್ತವ್ಯ ಲೋಪ ವೆಸಗಿದ ಬಗ್ಗೆ ನಿಯಮಾನುಸಾರ ವಿಚಾರಣೇ ನಡೆಸಿ, ಸೂಕ್ತ ಅಭಿಪ್ರಾಯದೊಂದಿಗೆ ವರದಿ ಸಲ್ಲಿಸಲು ದಿನಾಂಕ: 02-02-2023 ರನ್ವಯ ಶ್ರೀ ಗ್ಲಾಡ್‌ಸನ್ ಸಂಜಯಕುಮಾರ, ಅಬಕಾರಿ ಅಧೀಕ್ಷಕರು ರವರಿಗೆ ಸೂಚಿಸಲಾಗಿರುವುದಾಗಿ, ಅದರಂತೆ, ಸದರಿಯವರು ದಿನಾಂಕ:14-08-2023 ರಂದು ಸದರಿ ವಿಷಯದ ಕುರಿತು ವಿಚಾರಣೆ ನಡೆಸಿ, ವಿಚಾರಣಾ ವರದಿಯನ್ನು ಸಲ್ಲಿಸಿರುವುದಾಗಿ ತಿಳಿಸಿಸುತ್ತಾ, ದಿನಾಂಕ:09-11-2023 ರಂದು ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ.<br><br>ಶ್ರೀ ದೊಡ್ಡಪ್ಪ ಹೆಬಳೆ, ಅಬಕಾರಿ ಉಪ ಅಧೀಕ್ಷಕರು, ಉಪ ವಿಭಾಗ ಕಲಬುರಗಿ ಇವರ ವಿರುದ್ಧದ ಆರೋಪಕ್ಕೆ ಸಂಬಂಧಿಸಿದಂತೆ ದೋಷಾರೋಪಣ ಪಟ್ಟಿಯನ್ನು ದಿನಾಂಕ:07-06-2026 ರಂದು ಸಲ್ಲಿಸಲಾಗಿರುತ್ತದೆ.<br><br>**ಪ್ರಕರಣ ಪರಿಶೀಲನಾ ಹಂತದಲ್ಲಿರುತ್ತದೆ.** |
| 14. | **ಕಡತ ಸಂಖ್ಯೆ: EXCISE-17011/15/2023**<br><br>**ಆಪಾದಿತರ ಹೆಸರು:**<br><br>1. ಶ್ರೀ ಬಾಲಕೃಷ್ಣ ಮುದಕಣ್ಣ,-ಅ.ನಿ.<br>2. ಶ್ರೀ ನಿಂಬಣ್ಣ ಕಾಮಗೊಂಡ-ನಿವೃತ್ತ ಅ.ಉ.ಅ.<br>3. ಶ್ರೀ ಮಹಮದ್ ಇಸ್ಮಾಯಿಲ್ ಇನಾಂದಾರ್,- ನಿವೃತ್ತ ಅ.ಅ | **ಶ್ರೀ ಫಕೀರಪ್ಪ ಹೆಚ್. ಛಲವಾದಿ**, ಅಂದಿನ ಅಬಕಾರಿ ಉಪ ಆಯುಕ್ತರು, ಕಲಬುರಗಿ ಜಿಲ್ಲೆ ಇವರು ಸದರಿಯವರಿಗೆ ಜಾರಿ ಮಾಡಿರುವ ದೋಷಾರೋಪಣಾ ಪಟ್ಟಿಯನ್ನು ಪ್ರಶ್ನಿಸಿ ಅರ್ಜಿ ಸಂಖ್ಯೆ: 10646/2025 ರನ್ವಯ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಬೆಳಗಾವಿ ಮತ್ತು **ಶ್ರೀಮತಿ ಶಶಿಕಲಾ ಎಸ್. ಒಡೆಯರ್**, ಅಂದಿನ ಅಬಕಾರಿ ಉಪ ಆಯುಕ್ತರು, ಕಲಬುರಗಿ ಜಿಲ್ಲೆ ಇವರು ಅರ್ಜಿ ಸಂಖ್ಯೆ:2843/2025 ರನ್ವಯ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಬೆಂಗಳೂರು ಇಲ್ಲಿ |

| | | |
|---|---|---|
| | 4. ಶ್ರೀ ಎಫ್ ಹೆಚ್ ಛಲವಾದಿ- ಅಂದಿನ ಅ.ಉ.ಆ<br>**5.** ಶ್ರೀಮತಿ ಶಶಿಕಲಾ ಒಡೆಯರ್,- ಆ.ಉ.ಆ<br><br>**ವಿಷಯ:** ಶ್ರೀ ಮಹೇಶ್ ತಂದೆ ರಾಮಯ್ಯ ಯರಗೋಳ ಕಲಬುರಗಿ ನಗರದ ಸ್ಟೇಷನ್ ಬಜಾರ್ ಏರಿಯಾದ ಕಟ್ಟಡ ಸಂಖ್ಯೆ:1-576 &1-577 ರಲ್ಲಿ ಹೊಂದಿದ ಸಿಎಲ್-7 ಸನ್ನದು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ನಿಯಮ 5(1) ರನ್ವಯ ಆಕ್ಷೇಪಣೆಗೆ ಒಳಪಟ್ಟ ಸನ್ನದನ್ನು 2020-21 ಹಾಗೂ 2021-2022 ನೇ ಸಾಲಿಗೆ ಸನ್ನದು ನವೀಕರಿಸಲು ಶಿಫಾರಸ್ಸು ಮಾಡಿದ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಕುರಿತು. | ಮೇಲ್ಮನವಿ ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಗಳಿಗೆ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯು ವಿಚಾರಣೆಯ ಮುಂದಿನ ಪ್ರಕ್ರಿಯೆಗೆ ತಡೆಯಾಜ್ಞೆಯನ್ನು ನೀಡಿರುತ್ತದೆ. ಈ ಇಬ್ಬರು ಅಧಿಕಾರಿಗಳ ವಿರುದ್ಧದ ತಡೆಯಾಜ್ಞೆ ತೆರವುಗೊಂಡ ನಂತರ ಅವರುಗಳ ವಿರುದ್ಧದ ಆರೋಪಕ್ಕೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಯನ್ನು ಮುಂದುವರೆಸಲಾಗುವುದು.<br><br>ಸರ್ಕಾರಿ ವಕೀಲರು, ಘನ ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು ಇವರಿಗೆ ದಿನಾಂಕ:21-08-2025 ರಂದು ಕಂಡಿಕೆ ವಾರು ಷರಾವನ್ನು ಸಲ್ಲಿಸಲಾಗಿರುತ್ತದೆ.<br><br>**ಶ್ರೀ ಮೊಹಮ್ಮದ್ ಇಸ್ಮಾಯಿಲ್ ಇನಾಂದಾರ್, ನಿವೃತ್ತ ಅಬಕಾರಿ ಅಧೀಕ್ಷಕರು ಮತ್ತು ಶ್ರೀ ಬಾಲಕೃಷ್ಣ ಮುದುಕಣ್ಣ, ನಿವೃತ್ತ ಅಬಕಾರಿ ನಿರೀಕ್ಷಕರು** ಇವರುಗಳ ವಿರುದ್ಧ ಇದೇ ನಿಯಮಾವಳಿಗಳ ನಿಯಮ 214(2)(ಬಿ) ರನ್ವಯ ಇಲಾಖಾ ವಿಚಾರಣೆ ನಡೆಸಲು ಅಬಕಾರಿ ಆಯುಕ್ತರನ್ನು ಶಿಸ್ತು ಪ್ರಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.<br><br>ಆಪಾದಿತರುಗಳು ಸಮಜಾಯಿಷಿಯನ್ನು ಸಲ್ಲಿಸಿದ್ದು, ಸದರಿ ಸಮಜಾಯಿಷಿಯನ್ನು ಒಪ್ಪಲು ಸಾಧ್ಯವಿಲ್ಲದಿರುವುದರಿಂದ ಇಲಾಖಾ ವಿಚಾರಣೆಗೆ ಆದೇಶಿಸುವ ಸಂಬಂಧ **ಕಡತ ಚಾಲನೆಯಲ್ಲಿದೆ.** |
| 15. | **ಕಡತ ಸಂಖ್ಯೆ: EXCISE-17011/34/2023**<br><br>**ಆಪಾದಿತರ ಹೆಸರು:**<br><br>1. ಶ್ರೀ ಅನೀಲ್ ಕುಮಾರ್ ಪೊದ್ದಾರ್, ಅ.ಅ<br>2. ಶ್ರೀ ಆನಂದ್ ಉಕ್ಕಲಿ,. ಅ.ಉ.ಅ.<br>3. ಶ್ರೀ ಸತ್ಯಾನಾರಾಯಣ ತ್ರಿವೇದಿ,- ಅ.ನಿ.<br><br>**ವಿಷಯ:** ತಪ್ಪು ಮಾಹಿತಿ ನೀಡಿ ಸಿಎಲ್-7 ಸನ್ನದನ್ನು ಮಂಜೂರಾತಿಗಾಗಿ ಶಿಫಾರಸ್ಸು ಮಾಡಿರುವುದು. (ನೀತಾ ಗಂಡ ಶೈಲೇಂದ್ರ ಇವರ ಹೆಸರಿಗೆ ಸಿಎಲ್-7 ಮಂಜೂರು ಮಾಡುವಂತೆ ಶೀಫಾರಸ್ಸು ಮಾಡಿರುವುದರ ಕುರಿತು) | ದೋಷಾರೋಪಣಾ ಪಟ್ಟಿಗೆ ಸಂಬಂಧಿಸಿದಂತೆ, ಸದರಿ ನೌಕರರುಗಳಾದ ಶ್ರೀ ಅನಿಲ್ ಕುಮಾರ್ ಪೊದ್ದಾರ, ಅಬಕಾರಿ ಅಧೀಕ್ಷಕರು, ಶ್ರೀ ಆನಂದ್ ಉಕ್ಕಲಿ,. ಅ.ಉ.ಅ. ಮತ್ತು ಶ್ರೀ ಸತ್ಯಾನಾರಾಯಣ ತ್ರಿವೇದಿ,- ಅ.ನಿ. ಇವರುಗಳು ದಿನಾಂಕ:18-09-2028 ರಂದು ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ.<br><br>**ಇಲಾಖಾ ವಿಚಾರಣೆ ಪ್ರಾರಂಭಿಸಲು ಪರಿಶೀಲನಾ ಹಂತದಲ್ಲಿರುತ್ತದೆ.** |

| | | |
|---|---|---|
| 16. | **ಕಡತ ಸಂಖ್ಯೆ: EXCISE-17011/13/2024.**<br><br>**ಆಪಾದಿತರ ಹೆಸರು:**<br>1. ಶ್ರೀರಾಮ ರಾಠೋಡ, ಅಂದಿನ ಅ.ಉ.ಅ. ಹಾಲಿ ಅ.ಅ<br>2. ಶ್ರೀ ಚಂದ್ರಶೇಖರ್, -ಕ.ಅ.<br><br>ವಿಷಯ: ಮೇಲಾಧಿಕಾರಿಗಳಿಂದ ಪೂರ್ವಾನುಮತಿ ಪಡೆಯದೇ ಕಛೇರಿ ಟಿಪ್ಪಣಿಯಲ್ಲಿ ರಹದ್ದಾರಿ ಪತ್ರ ತಯಾರಿಸಿದ ಬಗ್ಗೆ ಉಲ್ಲೇಖಿಸದೆ, ಅಬಕಾರಿ ಉಪ ಆಯುಕ್ತರು ರಾಯಚೂರು ಜಿಲ್ಲೆ ರವರ ಯಾವುದೇ ಪೂರ್ವಾನುಮತಿ ಪಡೆಯದೆ ರಹದ್ದಾರಿ ಪತ್ರಗಳನ್ನು ತಯಾರಿಸಿರುವ ಬಗ್ಗೆ, ಇವರುಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಕುರಿತು. | ಆರೋಪಿತ ಅಧಿಕಾರಿಗಳ ವಿರುದ್ಧ ಆರೋಪದ ಪ್ರಮುಖ ಅಂಶ ಎಂದರೆ, ಅಬಕಾರಿ ಉಪ ಆಯುಕ್ತರಿಗೆ ಪ್ರದತ್ತವಾಗಿರುವ ಮೊಲಾಸಿಸ್ ಸಾಗಾಣಿಕೆಯ ರಹದಾರಿ ನೀಡುವಿಕೆಯನ್ನು ಅಬಕಾರಿ ಉಪ ಆಯುಕ್ತರ ಗಮನಕ್ಕೆ ತರದಂತೇ ಕಛೇರಿ ಅಧೀಕ್ಷಕರು ಹಾಗೂ ಅಬಕಾರಿ ಅಧೀಕ್ಷಕರು (ಪ್ರಭಾರ) ಇವರುಗಳು ತಮ್ಮ ವ್ಯಾಪ್ತಿಯನ್ನು ಮೀರಿ ಅಕ್ರಮವಾಗಿ ನೀಡಿರುವುದಾಗಿದೆ. ಸದರಿ ಆರೋಪಕ್ಕೆ ಸಂಬಂದಿಸಿದಂತೆ ಆರೋಪಿತ ಅಧಿಕಾರಿಗಳು ನೀಡಿರುವ ಸಮಜಾಯಿಷಿಯಲ್ಲಿ ಯಾವುದೇ ಸ್ಪಷ್ಟ ವಿವರಣೆ ನೀಡಿರುವುದಿಲ್ಲ ಹಾಗೂ ಅಧಿಕಾರಿಗಳ ವಿವರಣೆಯಿಂದ ಅಬಕಾರಿ ಉಪ ಆಯುಕ್ತರ ಅನುಮತಿ ಇಲ್ಲದೇ ತಾವೇ ರಹದಾರಿ ಪತ್ರವನ್ನು ತಯಾರಿಸಿ ಸಹಿ ಮಾಡಿ ಅದರ ಪ್ರತಿಗಳನ್ನು ಸನ್ನದುದಾರರಿಗೆ ಮೊಬೈಲ್ ಮೂಲಕ ತೆಗೆದುಕೊಳ್ಳಲು ಅವಕಾಶ ನೀಡಿ, ಆನಂತರ ವಾಹನದ ಸಾಗಾಣಿಕೆಯ ಸಮಯದಲ್ಲಿ ಮೊಕದ್ದಮೆ ದಾಖಲಾದ ನಂತರ ರಹದಾರಿಯನ್ನು ರದ್ದುಪಡಿಸಿರುವುದು ಮೇಲ್ನೋಟಕ್ಕೆ ಸಾಬೀತಾಗಿದ್ದು, ಸದರಿ ಪ್ರಕರಣದ ಬಗ್ಗೆ ಹೆಚ್ಚಿನ ತನಿಖೆ ಅಗತ್ಯವಿದ್ದು, ಸಂಬಂದಿಸಿದಂತೆ ಆಪಾದಿತರಿಗೆ ದೋಷಾರೋಪಣಾ ಪಟ್ಟಿಯನ್ನು ದಿನಾಂಕ: ಜಾರಿ ಮಾಡಲಾಗಿರುತ್ತದೆ.<br><br>ಆಪಾದಿತರುಗಳು ಸಮಜಾಯಿಷಿಯನ್ನು ಸಲ್ಲಿಸಿದ್ದು, ಸದರಿ ಸಮಜಾಯಿಷಿಯನ್ನು ಒಪ್ಪಲು ಸಾಧ್ಯವಿಲ್ಲದಿರುವುದರಿಂದ ಇಲಾಖಾ ವಿಚಾರಣೆಗೆ ಆದೇಶಿಸುವ ಸಂಬಂಧ **ಕಡತ ಚಾಲನೆಯಲ್ಲಿದೆ.** |

| | 2022 ನೇ ಸಾಲಿನಿಂದ ಅಬಕಾರಿ ಇಲಾಖೆಯ ಉನ್ನತ ಅಧಿಕಾರಿಗಳ (ಗ್ರೂಪ್ "ಎ"ಮತ್ತು ಗ್ರೂಪ್ "ಬಿ) ವಿರುದ್ಧದ ಶಿಸ್ತು ಕ್ರಮದ ಪ್ರಕರಣಗಳ ವಿವರ (ಲೋಕಾಯುಕ್ತ) | |
|---|---|---|
| 17. | **ಕಡತ ಸಂಖ್ಯೆ:**<br><br>**EXCISE-17011/5/2026**<br><br>**ಮೊ.ಸಂ:01/2026 ಕಲಂ.7(a) ಭ್ರಷ್ಟಾಚಾರ ಪ್ರತಿಬಂಧಕಕಾಯ್ದೆ 1988 (ತಿದ್ದುಪಡಿ ಕಾಯ್ದೆ-2018)**<br><br>**ಆಪಾದಿತರ ಹೆಸರು**<br><br>1. ಶ್ರೀ ಜಗದೀಶ್ ನಾಯ್ಕ, ಅಂದಿನ ಅಬಕಾರಿ ಉಪ ಆಯುಕ್ತರು, ಬಿಯುಡಿ-8.<br>2. ಶ್ರೀ ತಮ್ಮಣ್ಣ ಕೆ.ಎಂ., ಅಂದಿನ ಅಬಕಾರಿ ಅಧೀಕ್ಷಕರು, ಬೆಂಗಳೂರು ನಗರ ಜಿಲ್ಲೆ-8.<br>3. ಶ್ರೀ ಲಕ್ಕಪ್ಪ ಗಣಿ, ಅಂದಿನ ಅಬಕಾರಿ ಪೇದೆ, ವಲಯ-47, ಬಿಯುಡಿ-8<br><br>**ವಿಷಯ:**<br><br>ಶ್ರೀ ಲಕ್ಷ್ಮಿನಾರಾಯಣ. ಸಿ ರವರ ದೂರಿನನ್ವಯ ಬೆಂಗಳೂರು ನಗರ ಜಿಲ್ಲೆ-8ರ ವ್ಯಾಪ್ತಿಯ 03 ಜನ ಅಬಕಾರಿ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಲಂಚಕ್ಕೆ ಬೇಡಿ ಇಟ್ಟಿದ್ದಕ್ಕಾಗಿ ಬೆಂಗಳೂರು ನಗರ ವಿಭಾಗದಲ್ಲಿ ಮೊ.ಸಂ: 01/2026 ಕಲಂ.7(a) | ಶ್ರೀ ಲಕ್ಷ್ಮಿನಾರಾಯಣ.ಸಿ ರವರು ದಿನಾಂಕ:16.01.2026 ರಂದು ನೀಡಿದ ದೂರಿನ ಮೇರೆಗೆ ಕರ್ನಾಟಕ ಲೋಕಾಯುಕ್ತ ಬೆಂಗಳೂರು ನಗರ ವಿಭಾಗದಲ್ಲಿ **ಮೊ.ಸಂ:01/2026 ಕಲಂ.7(a) ಭ್ರಷ್ಟಾಚಾರ ಪ್ರತಿಬಂಧಕಕಾಯ್ದೆ 1988 (ತಿದ್ದುಪಡಿ ಕಾಯ್ದೆ-2018)** ರಂತೆ ಜಗದೀಶ್ ನಾಯ್ಕ, ಅಬಕಾರಿ ಉಪ ಆಯುಕ್ತರು, ಬಿಯುಡಿ-8, ತಮ್ಮಣ್ಣ ಕೆ.ಎಂ., ಅಬಕಾರಿ ಅಧೀಕ್ಷಕರು, ಬೆಂಗಳೂರು ನಗರ ಜಿಲ್ಲೆ-8 ಹಾಗೂ ಲಕ್ಕಪ್ಪ ಗಣಿ, ಅಬಕಾರಿ ಪೇದೆ, ವಲಯ-47, ಬಿಯುಡಿ-8 ಈ 03 ಜನ ಅಧಿಕಾರಿ/ನೌಕರರ ವಿರುದ್ಧ ಪ್ರಕರಣ ದಾಖಲಿಸಿ, 03 ಜನ ಅಧಿಕಾರಿ/ನೌಕರರನ್ನು ದಸ್ತಗಿರಿ ಮಾಡಿರುತ್ತಾರೆ.<br><br>ಅದರಂತೆ, ದಿನಾಂಕ:20-01-2026 ರ ಸರ್ಕಾರದ ಆದೇಶದಲ್ಲಿ ಶ್ರೀ ಜಗದೀಶ್ ನಾಯ್ಕ್, ಹಾಗೂ ಶ್ರೀ ತಮ್ಮಣ್ಣ ಕೆ.ಎಂ., ಇವರನ್ನು ಅಮಾನತ್ತುಗೊಳಿಸಿ, ಅಮಾನತ್ತಿನಲ್ಲಿ ಶ್ರೀ ಜಗದೀಶ್ ನಾಯ್ಕ, ಅಬಕಾರಿ ಉಪ ಆಯುಕ್ತರು ಇವರ ಲೀನ್ ಅನ್ನು ಶಿವಮೊಗ್ಗ ಜಿಲ್ಲೆ ಹಾಗೂ ಶ್ರೀ ಕೆ.ಎಂ.ತಮ್ಮಣ್ಣ, ಅಬಕಾರಿ ಅಧೀಕ್ಷಕರು ಇವರ ಲೀನ್ ಅನ್ನು ತುಮಕೂರು ಕೆ.ಎಸ್.ಜಿ.ಎಲ್. ಡಿಪೋ ಇಲ್ಲಿಗೆ ವರ್ಗಾಯಿಸಿ ಆದೇಶಿಸಿರುತ್ತಾರೆ. ಹಾಗೂ ಅಬಕಾರಿ ಆಯುಕ್ತರ ಆದೇಶ ದಿನಾಂಕ:19-01-2026 ರಲ್ಲಿ ಶ್ರೀ ಲಕ್ಕಪ್ಪ ಗಣಿ, ಅಬಕಾರಿ ಪೇದೆ, ವಲಯ-47, ಬೆಂಗಳೂರು ನಗರ ಜಿಲ್ಲೆ-8 ಇವರನ್ನು ಇಲಾಖಾ ವಿಚಾರಣೆ ಕಾಯ್ದಿರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿದೆ. ಹಾಗೂ ಇವರ ಲೀನ್‌ನ್ನು ಕೆ.ಎಸ್.ಬಿ.ಸಿ.ಎಲ್. ಡಿಪೋ, ಸಿಂಧನೂರು, ರಾಯಚೂರು ಜಿಲ್ಲೆ ಇಲ್ಲಿಗೆ ಸ್ಥಳಾಂತರಿಸಿ ಆದೇಶಿಸಲಾಗಿರುತ್ತದೆ.<br><br>**ಪ್ರಕರಣವು ಲೋಕಾಯುಕ್ತದಲ್ಲಿ ತನಿಖಾ ಹಂತದಲ್ಲಿರುತ್ತದೆ.** |

| | | |
|---|---|---|
| | ಭ್ರಷ್ಟಾಚಾರ ಪ್ರತಿಬಂಧಕಕಾಯ್ದೆ 1988 (ತಿದ್ದುಪಡಿ ಕಾಯ್ದೆ-2018) ರಂತೆ ಪ್ರಕರಣ ದಾಖಲಿಸಲಾಗಿರುವ ಅಧಿಕಾರಿಗಳ ವಿರುದ್ಧ ಶಿಸ್ತು ಕುರಿತು.<br><br>**ಸಿಎಲ್-7 ಸನ್ನದು ಮಂಜೂರಾತಿಗಾಗಿ ಲಂಚ ಬೇಡಿಕೆ ಆರೋಪ** | |
| 18. | **ಕಡತ ಸಂಖ್ಯೆ:**<br>17011/37/2024<br>**ಮೊಕದ್ದಮೆ ಸಂ:42/2024 ಕಲಂ 13(1)(ಬಿ) 13(2) 1988 ಭ್ರಷ್ಟಚಾರ ನಿಗ್ರಹ ಕಾಯಿದೆ, ದಿನಾಂಕ:20.11.2024**<br><br>**ಆಪಾದಿತರ ಹೆಸರು:**<br>ಶ್ರೀ ಮೋಹನ.ಕೆ. ಅಬಕಾರಿ ಅಧೀಕ್ಷಕರು, ಅಬಕಾರಿ ಜಂಟಿ ಆಯುಕ್ತರ ಕಛೇರಿ (ಜಾರಿ ಮತ್ತು ತನಿಖೆ), ಬೆಂಗಳೂರು ವಿಭಾಗ (ದಕ್ಷಿಣ) ಬೆಂಗಳೂರು.<br><br>**ವಿಷಯ:**<br>ಆಪಾದಿತರ ವಿರುದ್ಧ ಕಲಂ 13(1)(ಬಿ) 13(2) 1988 ಭ್ರಷ್ಟಚಾರ ನಿಗ್ರಹ ಕಾಯಿದೆ ಅಡಿಯಲ್ಲಿ ಕರ್ನಾಟಕ ಲೋಕಾಯುಕ್ತ ಬೆಂಗಳೂರು ನಗರ ಪೋಲೀಸ್ ಠಾಣೆ ಇವರು ದಾಖಲಿಸಿರುವ ಪ್ರಥಮ ವರ್ತಮಾನ ವರದಿ ಸಂ: 42/2024, ದಿನಾಂಕ: 20.11.2024 ನೇದ್ದರ ಕುರಿತು. | ಮೋಹನ.ಕೆ. ಅಬಕಾರಿ ಅಧೀಕ್ಷಕರು, ಅಬಕಾರಿ ಜಂಟಿ ಆಯುಕ್ತರ ಕಛೇರಿ (ಜಾರಿ ಮತ್ತು ತನಿಖೆ), ಬೆಂಗಳೂರು ವಿಭಾಗ (ದಕ್ಷಿಣ) ಬೆಂಗಳೂರು ಇವರ ವಿರುದ್ಧ ಬೆಂಗಳೂರು ನಗರ ಪೋಲೀಸ್ ಠಾಣೆ, ಕರ್ನಾಟಕ ಲೋಕಾಯುಕ್ತ ಇಲ್ಲಿ ದಿನಾಂಕ:20.11.2024 ರಂದು ಪ್ರಥಮ ವರ್ತಮಾನ ವರದಿ ಸಂ:42/2024 ಕಲಂ 13(1)(ಬಿ) 13(2) 1988 ಭ್ರಷ್ಟಚಾರ ನಿಗ್ರಹ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ.<br><br>ದಿನಾಂಕ:16-12-2024 ರಲ್ಲಿ ಮಾನ್ಯ ಲೋಕಾಯುಕ್ತರು ಶ್ರೀ ಮೋಹನ.ಕೆ. ಇವರ ಆಸ್ತಿ ಮತ್ತು ಋಣಪಟ್ಟಿಗಳು, ವೇತನಾ ವರದಿಗಳು ಹಾಗೂ ಕಾರ್ಯನಿರ್ವಹಣಾ ವರದಿಗಳನ್ನು ಸ್ಲಲಿಸುವಂತೆ ಕೋರಿರುತ್ತಾರೆ. ಹಾಗೂ ದಿನಾಂಕ:29-12-2025 ರಲ್ಲಿ ಶ್ರೀ ಮೋಹನ್. ಕೆ ಇವರ ಆಸ್ತಿ ಮತ್ತು ಋಣ ಪಟ್ಟಿಗಳು ಹಾಗೂ ವೇತನ ವಿವರಗಳನ್ನು ಮಾನ್ಯ ಲೋಕಾಯುಕ್ತಕ್ಕೆ ಸಲ್ಲಿಸಲಾಗಿದೆ.<br><br>ಶ್ರೀ ಮೋಹನ.ಕೆ ಇವರು ತಮ್ಮ ವಿರುದ್ಧ ದಾಖಲಾಗಿರುವ ಮೊಕದ್ದಮೆ ಸಂಖ್ಯೆ:42/2024 ನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ **ರಿಟ್ ಅರ್ಜಿ ಸಂಖ್ಯೆ:33911/2024** ನ್ನು ದಾಖಲಿಸಿರುತ್ತಾರೆ. **ದಿನಾಂಕ:23-01-2025** ರಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ಸದರಿ ಮೊಕದ್ದಮೆಯಲ್ಲಿ ಮುಂದಿನ ಕ್ರಮ ಕೈಗೊಳ್ಳದಂತೆ ತಡೆಯಾಜ್ಞೆಯನ್ನು ನೀಡಿ ಆದೇಶಿಸಿರುತ್ತದೆ.<br><br>**ಪ್ರಕರಣ ಲೋಕಾಯುಕ್ತ ಹಂತದಲ್ಲಿ ಬಾಕಿ ಇರುತ್ತದೆ.** |

| | | |
|---|---|---|
| 19. | ಇಸಿಇ/02/ಮಂಗಳೂರು ವಿಭಾಗ/ಡಿಎಸ್‌ಸಿ(3)/2018.<br><br>(ಎಕ್ಸೈಜ್ -17011/26/2021).<br><br>**( ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿರುವ ಆರೋಪ).**<br><br>**ಆರೋಪಿತರು :**<br>ಶ್ರೀ ಕೆ. ವಿನೋದ್ ಕುಮಾರ್, ಅ.ಉ.ಅ., ಉಡುಪಿ ಜಿಲ್ಲೆ.<br><br>**ಆರೋಪ:**<br>ಆದಾಯಕ್ಕಿಂತ ಹೆಚ್ಚಿನ ಆಸ್ತಿಯನ್ನು ಹೊಂದಿರುವ ಬಗ್ಗೆ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ), ಉಡುಪಿ ಜಿಲ್ಲೆ ಇಲ್ಲಿ ಪ್ರಕರಣ ಸಂ. 02/2018 ದಾಖಲಾಗಿರುವ ಬಗ್ಗೆ. | ಅಬಕಾರಿ ಆಯುಕ್ತರು ದಿ:10-07-2018 ರಂದು ಆಪಾದಿತರನ್ನು ಅಮಾನತ್ತುಗೊಳಿಸಿರುತ್ತಾರೆ.<br><br>ತದನಂತರ, ದಿ: 28-11-2018 ರಂದು ಅಮಾನತ್ತು ತೆರವುಗೊಳಿಸಿರುತ್ತಾರೆ.<br><br>ಸರ್ಕಾರದ ಆದೇಶ ಸಂ. ಆಇ 22 ಇಪಿಎಸ್ 2022, ಬೆಂಗಳೂರು, ದಿನಾಂಕ: 13-04-2023 ರಲ್ಲಿ ಅಭಿಯೋಜನಾ ಮಂಜೂರಾತಿ ನೀಡಿರುತ್ತದೆ.<br><br>ಸರ್ಕಾರದ ಆದೇಶ ಸಂ. ಆಇ 54 ಇಪಿಎಸ್ 2024, ಬೆಂಗಳೂರು, ದಿನಾಂಕ: 01-10-2024 ರಲ್ಲಿ ಶ್ರೀ ಕೆ.ವಿನೋದ್ ಕುಮಾರ್, ಅಬಕಾರಿ ಉಪ ಅಧೀಕ್ಷಕರು ಇವರ ವಿರುದ್ಧದ ಆರೋಪಗಳಿಗಾಗಿ ನಿಯಮ 14ಎ) ರಡಿ ಪೂರ್ಣ ಪ್ರಮಾಣದ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಉಪ ಲೋಕಾಯುಕ್ತರು-2 ಇವರಿಗೆ ವಹಿಸಿ ಆದೇಶಿಸಿರುತ್ತದೆ.<br><br>ಉಪ ಲೋಕಾಯುಕ್ತರು, ಆದೇಶ ಸಂ. UPLOK-2/DE/145/2024 BENGALURU, DATED 22-10-2024 ರಲ್ಲಿ ಸದರಿ ಪ್ರಕರಣದ ಇಲಾಖಾ ವಿಚಾರಣೆ ನಡೆಸಲು Additional Registrar of Enquiries-13, Karnataka Lokayuktha, Bengaluru ಇವರನ್ನು ನೇಮಿಸಿ ಆದೇಶಿಸಿರುತ್ತಾರೆ.<br><br>ಪ್ರಕರಣಕ್ಕೆ ಸಂಬಂಧಿಸಿದಂತೆ ದಿ: 21-11-2023 ರಂದು ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ.21484/2023 ರಲ್ಲಿ SPl. CC No. 42/2023 ರ ವಿಚಾರಣೆಯ ಮುಂದಿನ ಪ್ರಕ್ರಿಯೆಗೆ ತಡೆಯಾಜ್ಞೆಯನ್ನು ನೀಡಿರುತ್ತದೆ.<br><br>**ಪ್ರಕರಣ ಲೋಕಾಯುಕ್ತರ ಹಂತದಲ್ಲಿ ವಿಚಾರಣೆಯಲ್ಲಿರುತ್ತದೆ.** |
| 20. | **ಕಡತ ಸಂ. 17011/36/2024.** | **ಶ್ರೀ ರವಿಶಂಕರ್ ಎ., ಅಬಕಾರಿ ಉಪ ಆಯುಕ್ತರು**, ಮಂಡ್ಯ ಜಿಲ್ಲೆ ಇವರನ್ನು |

| | | |
|---|---|---|
| | **ಆರೋಪಿತರು** :<br><br>1) ಶ್ರೀ ರವಿಶಂಕರ್ ಎ., ಅಬಕಾರಿ ಉಪ ಆಯುಕ್ತರು, ಮಂಡ್ಯ ಜಿಲ್ಲೆ.<br><br>2) ಶ್ರೀ ಶಿವಶಂಕರ್ ಆರಾಧ್ಯ, ಅಬಕಾರಿ ನಿರೀಕ್ಷಕರು, ಮದ್ದೂರು ವಲಯ, ಮಂಡ್ಯ ಜಿಲ್ಲೆ.<br><br>**ಆರೋಪ:**<br>ಮಂಡ್ಯ ಜಿಲ್ಲೆಯಲ್ಲಿ ಹೊಸದಾಗಿ ಸಿಎಲ್-7 ಸನ್ನದು ಮಂಜೂರಾತಿಗಾಗಿ ಲಂಚದ ಬೇಡಿಕೆ ಇಟ್ಟಿರುವ ಕುರಿತು ಶಿಸ್ತು ಕ್ರಮ ಜರುಗಿಸುವ ಬಗ್ಗೆ. | ಸರ್ಕಾರವು ಆದೇಶ ಸಂ. ಆಇ 200 ಇಪಿಎಸ್2024, ಬೆಂಗಳೂರು, ದಿ: 29-11-2024 ರಲ್ಲಿ ಅಮಾನತ್ತುಗೊಳಿಸಿ ಆದೇಶಿಸಿರುತ್ತದೆ.<br><br>ಸದರಿ ಆದೇಶವನ್ನು ಪ್ರಶ್ನಿಸಿ ಸದರಿ ಅಬಕಾರಿ ಉಪ ಆಯುಕ್ತರು ಮಾನ್ಯ ಕೆ.ಎಸ್.ಎ.ಟಿ, ಬೆಂಗಳೂರು ಇಲ್ಲಿ ಮೇಲ್ಮನವಿ ಸಂ. 5511/2024 ಅನ್ನು ಸಲ್ಲಿಸಿರುತ್ತಾರೆ.<br><br>ಮಾನ್ಯ ನ್ಯಾಯ ಮಂಡಳಿಯು ಸದರಿ ಮೇಲ್ಮನವಿ ಸಂ. 5511/2024 ಅನ್ನು ಪುರಸ್ಕರಿಸಿ ದಿನಾಂಕ: 09-01-2025 ರಂದು ಆದೇಶಿಸಿರುತ್ತದೆ.<br><br>ಸದರಿ ವಿಷಯವನ್ನು ಮುಂದಿನ ಕ್ರಮಕ್ಕಾಗಿ ದಿ: 29-01-2025 ರಂದು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.<br><br>ತದನಂತರ, ದಿ: 29-08-2025 ರಂದು ಕರಡು ದೋಷಾರೋಪಣ ಪಟ್ಟಿ ಅನುಬಂಧ 01 ರಿಂದ 04 ಅನ್ನು ಸಲ್ಲಿಸಲಾಗಿದೆ.<br><br>**ಶ್ರೀ ಶಿವಶಂಕರ್ ಆರಾಧ್ಯ, ಅಬಕಾರಿ ನಿರೀಕ್ಷಕರು**, ಮದ್ದೂರು ವಲಯ, ಮಂಡ್ಯ ಜಿಲ್ಲೆ ಇವರನ್ನು ಅಬಕಾರಿ ಆಯುಕ್ತರು ಆದೇಶ ಸಂ. ಅಬಕಾರಿ 17011 / 36/ 2024/ಮಂಡ್ಯ ಜಿಲ್ಲೆ, ದಿ: 28-11-2024 ರಲ್ಲಿ ಅಮಾನತ್ತುಗೊಳಿಸಿ ಆದೇಶಿಸಿರುತ್ತಾರೆ.<br><br>ಸದರಿ ಆದೇಶವನ್ನು ಪ್ರಶ್ನಿಸಿ ಆಪಾದಿತರು ಮಾನ್ಯ ಕೆ.ಎಸ್.ಎ.ಟಿ, ಬೆಂಗಳೂರು ಇಲ್ಲಿ ಮೇಲ್ಮನವಿ ಸಂ. 5493/2024 ಅನ್ನು ಸಲ್ಲಿಸಿರುತ್ತಾರೆ.<br><br>ಮಾನ್ಯ ನ್ಯಾಯ ಮಂಡಳಿಯು ದಿನಾಂಕ: 09-01-2025 ರಂದು ಸದರಿ ಮೇಲ್ಮನವಿ ಸಂ. 5493/2024 ಅನ್ನು ವಜಾಗೊಳಿಸಿರುತ್ತದೆ.<br><br>ಆಪಾದಿತರ ಅಬಕಾರಿ ನಿರೀಕ್ಷಕರು ಅಬಕಾರಿ ಆಯುಕ್ತರ ದಿ: 28-11-2024 ರ ಆದೇಶವನ್ನು ಪ್ರಶ್ನಿಸಿ ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು ಇಲ್ಲಿ ಮೇಲ್ಮನವಿ |

| | | |
|---|---|---|
| | | ಸಂ. W.P. ನಂ.4053 /2025 ಅನ್ನು ಸಲ್ಲಿಸಿರುತ್ತಾರೆ.<br><br>ಆಪಾದಿತ ಅಬಕಾರಿ ನಿರೀಕ್ಷಕರ ಅಮಾನತ್ತು ಅವಧಿ 06 ತಿಂಗಳು ಪೂರ್ಣಗೊಳ್ಳುತ್ತಿದ್ದ ಕಾರಣ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಯಾವುದೇ ತಡೆಯಾಜ್ಞೆ ಇಲ್ಲದೇ ಇದ್ದುದರಿಂದ ಸದರಿ ಅಬಕಾರಿ ನಿರೀಕ್ಷಕರು ಅಮಾನತ್ತು ಆದೇಶವನ್ನು ಇನ್ನೂ 06 ತಿಂಗಳು ವಿಸ್ತರಿಸಿ ಅಬಕಾರಿ ಆಯುಕ್ತರು ದಿ: 29-05-2025 ರಂದು ಆದೇಶಿಸಿರುತ್ತಾರೆ.<br><br>ಆಪಾದಿತ ಅಬಕಾರಿ ನಿರೀಕ್ಷಕರು, ಅಮಾನತ್ತು ಅವಧಿ ವಿಸ್ತರಿಸಿದ ಅಬಕಾರಿ ಆಯುಕ್ತರ ದಿ: 29-05-2025 ರ ಆದೇಶವನ್ನು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು ಇಲ್ಲಿ ಪ್ರಶ್ನಿಸಿ ಮೇಲ್ಮನವಿ ಸಂ. 3445/2025 ಅನ್ನು ಸಲ್ಲಿಸಿರುತ್ತಾರೆ.<br><br>ಮಾನ್ಯ ನ್ಯಾಯ ಮಂಡಳಿಯು ಅಬಕಾರಿ ಆಯುಕ್ತರ ದಿ: 29-05-2025 ರ ಆದೇಶಕ್ಕೆ ತಾತ್ಕಾಲಿಕ ತಡೆಯಾಜ್ಞೆ ನೀಡಿ ದಿನಾಂಕ: 29-07-2025 ರಂದು ಆದೇಶಿಸಿರುತ್ತದೆ.<br><br>ದಿ: 05-11-2025 ರಂದು ಅಮಾನತ್ತು ತೆರವುಗೊಳಿಸಲಾಗಿರುತ್ತದೆ.<br><br>ತದನಂತರ, **ಶ್ರೀ ಶಿವಶಂಕರ ಆರಾಧ್ಯ**, ಅಬಕಾರಿ ನಿರೀಕ್ಷಕರು ಈವರ ವಿರುದ್ಧದ ಆರೋಪಕ್ಕಾಗಿ ದೋಷಾರೋಪಣ ಪಟ್ಟಿ ಅನುಬಂಧ-01 ರಿಂದ 04 ಅನ್ನು ಅನುಬಂಧ-03 ರಲ್ಲಿನ ದಾಖಲಾತಿಗಳೊಂದಿಗೆ ದಿನಾಂಕ: 29-08-2025 ರಂದು ಸಲ್ಲಿಸಲಾಗಿರುತ್ತದೆ. ಸಮಜಾಯಿಷಿ ಸ್ವೀಕೃತವಾಗಿದ್ದು, ಈ ಸಂಬಂಧ ಕಡತ ಚಾಲನೆಯಲ್ಲಿರುತ್ತದೆ.<br>(ಆಪಾದಿತರ ವಿರುದ್ಧದ ಶಿಸ್ತು ಕ್ರಮ ಚಾಲ್ತಿಯಲ್ಲಿರುತ್ತದೆ). |
| 21. | **ಕಡತ ಸಂಖ್ಯೆ: 17011/ 8 / 2024.**<br><br>**( Complaint by RTI Activist ).** | ಸರ್ಕಾರದ ಆದೇಶ ಸಂ. ಆಇ 76 ಇಪಿಎಸ್ 2024, ಬೆಂಗಳೂರು, ದಿನಾಂಕ: 18-09-2024 ರಲ್ಲಿ ಅಸದ್ ಪೀರ್, ಅಂದಿನ ಅಬಕಾರಿ ನಿರೀಕ್ಷಕರು, ರಾಣೆಬೆನ್ನೂರು ವಲಯ, ಹಾವೇರಿ ಜಿಲ್ಲೆ ಹಾಲಿ ಅಬಕಾರಿ ಉಪ ಅಧೀಕ್ಷಕರು, ಅಬಕಾರಿ ಆಯುಕ್ತರ ಕಛೇರಿ ಇವರ ವಿರುದ್ಧದ ಆರೋಪಗಳ ಕುರಿತು ನಿಯಮ 14-ಎ ರಡಿ ಪೂರ್ಣ ಪ್ರಮಾಣದ |

| | | |
|---|---|---|
| | **ಆರೋಪಿತರು: ಶ್ರೀ ಅಸದ್ ಪೀರ್, ಅನಿ, ರಾಣೆಬೆನ್ನೂರು ವಲಯ, ಹಾವೇರಿ ಜಿಲ್ಲೆ.**<br><br>**ವಿಷಯ:** ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಅರೆ ಸರ್ಕಾರಿ ಪತ್ರ ಸಂಖ್ಯೆ: COMPT/ UPLOK /BGM-864/2019/ARE-16, ದಿನಾಂಕ: 07-02-2024 ರ ಪತ್ರದಲ್ಲಿ ಅಬಕಾರಿ ಪ್ರಕರಣಗಳು ದಾಖಲಾಗಿದ್ದರೂ ಅಂತಹ ಸನ್ನದುಗಳನ್ನು ನವೀಕರಣಕ್ಕೆ ಶಿಫಾರಸ್ಸು ಮಾಡಿ ಕರ್ತವ್ಯ ಲೋಪವೆಸಗಿರುವ ಬಗ್ಗೆ, ರಾಮಮೂರ್ತಿ ಗೌಡ ಲೋಕಾಯುಕ್ತದಲ್ಲಿ ದೂರು ದಾಖಲಾಗಿದ್ದು, ಈ ಸಂಬಂಧ ಆರೋಪಿತರ ಆರೋಪಗಳಿಗಾಗಿ ನಿಯಮ 14-ಎ (2) (ಎ) (iii) ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಲೋಕಾಯುಕ್ತಕ್ಕೆ ವಹಿಸಲು ಕೋರಿರುತ್ತಾರೆ. | ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಿ ಸರ್ಕಾರವು ಆದೇಶಿಸಿರುತ್ತದೆ.<br><br>ಪ್ರಕರಣ ಲೋಕಾಯುಕ್ತರ ಹಂತದಲ್ಲಿರುತ್ತದೆ. |
| 22. | **ಕಡತ ಸಂ: ಅಬಕಾರಿ-17011 / 56 /2022.**<br><br>**(Governement Recommended Case)**<br><br>**ಆರೋಪಿತರು : ಶ್ರೀ ಪ್ರಶಾಂತ್ ಕುಮಾರ್. ಕೆ.**<br>**ಅಂದಿನ ಅಬಕಾರಿ ಉಪ ಆಯುಕ್ತರು,**<br>**ಧಾರವಾಡ ಜಿಲ್ಲೆ.**<br><br>**ವಿಷಯ:**<br><br>**NDPS ವಿಭಾಗದಿಂದ ಸ್ವೀಕೃತವಾದ ಕಡತದಲ್ಲಿ** | ಸರ್ಕಾರದ ಆದೇಶ ಸಂ. ಆಇ 44 ಇಪಿಎಸ್ 2024 ಬೆಂಗಳೂರು, ದಿನಾಂಕ: 08-11-2024 ರಲ್ಲಿ ಮಾನ್ಯ ಲೋಕಾಯುಕ್ತ ಕಾಯ್ದೆ1984 ರ ಕಲಂ 7 ರಡಿ ಪೂರ್ಣಪ್ರಮಾಣದ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಲೋಕಾಯುಕ್ತರಿಗೆ ವಹಿಸಿ ಸರ್ಕಾರವು ಆದೇಶಿಸಿರುತ್ತದೆ.<br><br>ಪ್ರಕರಣ ಲೋಕಾಯುಕ್ತರ ಹಂತದಲ್ಲಿರುತ್ತದೆ. |

| | | |
|---|---|---|
| | **MEDICAL SUPERINTENDENT, SDM COLLEGE OF MEDICAL SCIENCE & HOSPITAL, SATTUR, ಧಾರವಾಡ ಇವರಿಗೆ ನಿಗಧಿಪಡಿಸಲಾಗಿದ್ದ ವಾರ್ಷಿಕ ಕೋಟಗಿಂತ ಹೆಚ್ಚಿಗೆ ಔಷಧಗಳನ್ನು ಮಂಜೂರು ಮಾಡಿ ಕರ್ತವ್ಯಲೋಪ ಎಸಗಿರುವುದು.** | |
| 23. | **ಎಕ್ಸ್‌ಇಸ್-17011/46/2023.**<br><br>**ಪೊಲೀಸ್ ಠಾಣೆ ಅಪರಾಧ ಸಂಖ್ಯೆ:16/2023, ಕಲಂ 7(a), 7(b) 12 ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ-1988 (ತಿದ್ದುಪಡಿ ಕಾಯ್ದೆ-2018), ದಿನಾಂಕ:13-10-2023).**<br><br>1. **ಶ್ರೀಮತಿ ಸ್ವಪ್ನ ಆರ್.ಎಸ್.** ಅಬಕಾರಿ ಉಪ ಆಯುಕ್ತರು, ದಾವಣೆಗೆರ ಜಿಲ್ಲೆ, ದಾವಣಗೆರೆ.<br>2. ಶ್ರೀ ರವಿ ಎಂ. ಮರಿಗೌಡರ್, ಅಬಕಾರಿ ಉಪ ಅಧೀಕ್ಷಕರು<br>3. ಶ್ರೀಮತಿ ಶೀಲಾ ಜೆ. ಕೆ, ಅಬಕಾರಿ ನಿರೀಕ್ಷಕರು<br>4. ಶ್ರೀ ಅಶೋಕ್ ಎಫ್.ಡಿ.ಎ<br>5. ಶ್ರೀಮತಿ ಶೈಲಶ್ರೀ , ಎಸ್.ಡಿ.ಎ<br><br>**ಸಿಎಲ್-7 ಸನ್ನದು ಮಂಜೂರಾತಿಗಾಗಿ ಲಂಚದ ಬೇಡಿಕೆ ಇಟ್ಟಿರುವ ಆರೋಪ.** | ಶ್ರೀಮತಿ ಸ್ವಪ್ನ, ಅಬಕಾರಿ ಉಪ ಆಯುಕ್ತರು, ದಾವಣಗೆರೆ ಜಿಲ್ಲೆ, ದಾವರಣಗೆರೆ ಇವರಿಗೆ ಸಂಬಂಧಿಸಿದಂತೆ ದಾವಣಗೆರೆ ಲೋಕಾಯುಕ್ತ **ಪೊಲೀಸ್ ಠಾಣೆ ಅಪರಾಧ ಸಂಖ್ಯೆ:16/2023, ಕಲಂ 7(a), 7(b) 12 ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ-1988 (ತಿದ್ದುಪಡಿ ಕಾಯ್ದೆ-2018),** ದಿನಾಂಕ:13-10-2023 ರಲ್ಲಿ ಮೊಕದ್ದಮೆ ದಾಖಲಿಸಿರುತ್ತಾರೆ.<br><br>ಸರ್ಕಾರದ ಆದೇಶ ಸಂಖ್ಯೆ: ಆಇ/113/ಇಪಿಎಸ್/2023, ಬೆಂಗಳೂರು, ದಿನಾಂಕ: 28-11-2023 ರಲ್ಲಿ ಸದರಿ ಅಧಿಕಾರಿಯವರನ್ನು ದಿನಾಂಕ:15-10-2023 ರಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿರುತ್ತದೆ.<br><br>ಶ್ರೀಮತಿ.ಸ್ವಪ್ನ ಆರ್.ಎಸ್. ಅಬಕಾರಿ ಉಪ ಆಯುಕ್ತರು, ದಾವಣಗೆರೆ ಜಿಲ್ಲೆ ಇವರು ಮಾನ್ಯ ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಅಬಕಾರಿ) ರವರವ ದಿನಾಂಕ:28-11-2023 ರ ಆದೇಶಕ್ಕೆ ಮಾನ್ಯ ಕೆ.ಎ.ಟಿ.ಪ್ರಿನ್ಸಿಪಾಲ್ ಬೆಂಚ್, ಬೆಂಗಳೂರು ಇಲ್ಲಿ ಅರ್ಜಿ ಸಂಖ್ಯೆ:5117/2023, ದಿನಾಂಕ:04-12-2023 ರನ್ವಯ ತಡೆಯಾಜ್ಞೆ ನೀಡಿರುತ್ತದೆ. ಅರ್ಜಿ ಸಂಖ್ಯೆ:5117/2023, ದಿನಾಂಕ:05/04/2024 ರಂದು ಪ್ರಕರಣ ಇತ್ಯರ್ಥ ಗೊಂಡಿರುತ್ತದೆ. ಅರ್ಜಿದಾರರು ಅರ್ಜಿಯನ್ನು ಮಾನ್ಯ ನ್ಯಾಯಾಲಯವು ವಜಾಗೊಳಿಸಿರುತ್ತದೆ. |

| | | |
|---|---|---|
| | | ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 11085/2024ನ್ನು ದಾಖಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:23-04-2024 ರ ಆದೇಶದಲ್ಲಿ ಸರ್ಕಾರದ ಅಮಾನತ್ತು ಆದೇಶ ಹಾಗೂ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ:5117/2023ರ ಆದೇಶಕ್ಕೆ ದಿನಾಂಕ:05-04-2024 ರ ಆದೇಶಕ್ಕೆ ತಡೆಯಾಜ್ಞೆ ನೀಡಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ:ಆಇ/113/ಇಪಿಎಸ್/2023, ದಿನಾಂಕ:25-07-2024 ರಲ್ಲಿ ಸದರಿಯವರನ್ನು ಅಬಕಾರಿ ಉಪ ಆಯುಕ್ತರ ಕಛೇರಿ, ದಾವಣಗೆರೆ ಜಿಲ್ಲೆ ಇಲ್ಲಿಂದ ಮೆ. ಯುನೈಟೆಡ್ ಸ್ಪಿರಿಟ್ಸ್ ಲಿ., ಕುಂಬಳಗೋಡು, ಬೆಂಗಳೂರು ಇಲ್ಲಿಗೆ ವರ್ಗಾಯಿಸಿ ಆದೇಶಿಸಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ:ಆಇ /35/ಇಪಿಎಸ್/2024, ದಿನಾಂಕ:29-01-2025 ರಂದು ಸದರಿಯವರನ್ನು ಮೆ. ಯುನೈಟೆಡ್ ಸ್ಪಿರಿಟ್ಸ್ ಲಿ., ಕುಂಬಳಗೋಡು, ಬೆಂಗಳೂರು ಇಲ್ಲಿಂದ ಅಬಕಾರಿ ಉಪ ಆಯುಕ್ತರು, ಬೆಳಗಾವಿ ಉತ್ತರ ಜಿಲ್ಲೆ ಇಲ್ಲಿಗೆ ವರ್ಗಾಯಿಸಿ ಆದೇಶಿಸಲಾಗಿರುತ್ತದೆ.<br><br>ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಿನಾಂಕ:30-06-2025 ರಂದು ಸದರಿ ಪ್ರಕರಣವನ್ನು Disposed ಮಾಡಲಾಗಿರುತ್ತದೆ.<br><br>❖ **ಶ್ರೀ ರವಿ ಎಂ. ಮರಿಗೌಡರ್, ಅಬಕಾರಿ ಉಪ ಅಧೀಕ್ಷಕರು**<br><br>ದಿನಾಂಕ:06-12-2023 ರಲ್ಲಿ ಇವರ ವಿರುದ್ಧದ ಆರೋಪಕ್ಕೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಗೊಳಿಸಿ ಅವರ ಲೀನ್ ಅನ್ನು ಮೆ: ಎಂ.ಪಿ ಡಿಸ್ಟಿಲರೀಸ್, ಕೋಲಾರ ಇಲ್ಲಿಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಲಾಗಿರುತ್ತದೆ.<br><br>ಸದರಿಯವರು ಅವರ ಅಮಾನತ್ತು ಆದೇಶವನ್ನು ಮಾನ್ಯ ಕರ್ನಾಟಕ ರಾಜ್ಯ ಆಡಳಿತ |

ನ್ಯಾಯಮಂಡಳಿ, ಬೆಂಗಳೂರು ಇಲ್ಲಿ ಅಪೀಲ್ ಸಂಖ್ಯೆ:5236/2023 ರನ್ವಯ ಪ್ರಶ್ನಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ:06-12-2023 ರಂದು ಪ್ರಶ್ನಿತ ಅಮಾನತ್ತು ಆದೇಶಕ್ಕೆ ತಡೆಯಾಜ್ಞೆ ನೀಡಿರುತ್ತದೆ.

ಮಾನ್ಯ ಕರ್ನಾಟಕ ರಾಜ್ಯ ಆಡಳಿತ ಮಂಡಳಿಯು ಅರ್ಜಿ ಸಂಖ್ಯೆ:5236/2023 ರಲ್ಲಿ ದಿನಾಂಕ:05-04-2024 ರಂದು ಆಪಾದಿತರು ಸಲ್ಲಿಸಿರುವ ಮೇಲ್ಮನವಿಯನ್ನು ವಜಾಗೊಳಿಸಿ ಆದೇಶಿಸಿರುತ್ತದೆ.

ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯು ನೀಡಿರುವ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂ:11483/2024 ನ್ನು ದಾಖಲಿಸಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:30-07-2024 ರಂದು ಅಮಾನತ್ತು ಆದೇಶಕ್ಕೆ ತಡೆಯಾಜ್ಞೆ ನೀಡಿರುತ್ತದೆ. ದಿನಾಂಕ:04-11-2024 ರ ಅಬಕಾರಿ ಆಯುಕ್ತರು, ಬೆಂಗಳೂರು ರವರ ನಡವಳಿ ಆದೇಶ ದಿನಾಂಕ:04-11-2024 ರ ಅಮಾನತ್ತನ್ನು ತೆರವುಗೊಳಿಸಿ ಹಾಲಿ ಲೀನ್ ನಲ್ಲಿರುವ ಮೆ|| ಎಂ.ಪಿ ಡಿಸ್ಟಿಲರೀಸ್, ಕೋಲಾರ ಇಲ್ಲಿಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

❖ **ಶ್ರೀಮತಿ ಶೀಲಾ ಜೆ. ಕೆ, ಅಬಕಾರಿ ನಿರೀಕ್ಷಕರು**

ಅಬಕಾರಿ ಆಯುಕ್ತರ ಕಛೇರಿ, ಬೆಂಗಳೂರು ರವರ ಅಮಾನತ್ತು ನಡವಳಿ ಸಮ ಸಂಖ್ಯೆ ದಿನಾಂಕ:03-11-2023.

ಶ್ರೀಮತಿ. ಶೀಲಾ ಜೆ.ಕೆ., ಅಬಕಾರಿ ನಿರೀಕ್ಷಕರು ಇವರಿಗೆ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ:5123/2023 ದಿನಾಂಕ:29-11-2023 ರಲ್ಲಿ ಅಮಾನತ್ತು ಆದೇಶಕ್ಕೆ ತಡೆಯಾಜ್ಞೆ ನೀಡಿರುತ್ತದೆ. ಸದರಿಯವರ ಅರ್ಜಿ ಸಂಖ್ಯೆ: 5123/2023 (ಪ್ರಶ್ನಿತ ಅಮಾನತ್ತು ಆದೇಶ) ನ್ನು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯು ದಿನಾಂಕ:05/04/2024 ರಲ್ಲಿ ವಜಾಗೊಳಿಸಲಾಗಿರುತ್ತದೆ.

| | | |
|---|---|---|
| | | ಅಬಕಾರಿ ಆಯುಕ್ತರು, ಬೆಂಗಳೂರು ಇವರ ಆದೇಶ ದಿನಾಂಕ:07-04-2025 ರಂದು ಅಮಾನತ್ತು ತೆರವುಗೊಳಿಸಿ ಮೆ. ಕೃಷ್ಣಾಮೃಗ ಫ್ರೂಟ್ ವೈನ್ ಯಾರ್ಡ್, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ ಇಲ್ಲಿಗೆ ತೈನಾತಿಸಿ ಆದೇಶಿಸಿದೆ.<br><br>❖ **ಶ್ರೀ ಹೆಚ್ ಎಂ ಅಶೋಕ ಅಂದಿನ ಪ್ರಥಮ ದರ್ಜೆ ಸಹಾಯಕರು**,<br>ಅಬಕಾರಿ ಆಯುಕ್ತರ ಕಛೇರಿ, ಬೆಂಗಳೂರು ರವರ ಅಮಾನತ್ತು ನಡವಳಿ ಸಮ ಸಂಖ್ಯೆ ದಿನಾಂಕ:03-11-2023.<br>ಅಬಕಾರಿ ಆಯುಕ್ತರು, ಬೆಂಗಳೂರು ಇವರ ಆದೇಶ ದಿನಾಂಕ:19-04-2024 ರಂದು ಅಮಾನತ್ತು ತೆರವುಗೊಳಿಸಿ M/S I.C.P.L.SAMSON DISTILLERIES, DUGGAVATHI, Harappanahalli, Bellary ಇಲ್ಲಿಗೆ ತೈನಾತಿಸಿ ಆದೇಶಿಸಿದೆ.<br><br>❖ **ಶ್ರೀಮತಿ ಶೈಲಶ್ರೀ ಎಂ ಮಡಿವಾಳರ ಅಂದಿನ ದ್ವಿತೀಯ ದರ್ಜೆ ಸಹಾಯಕರು, ದಾವಣಗೆರೆ ಜಿಲ್ಲೆ**,<br>ಅಬಕಾರಿ ಆಯುಕ್ತರ ಕಛೇರಿ, ಬೆಂಗಳೂರು ರವರ ಅಮಾನತ್ತು ನಡವಳಿ ಸಮ ಸಂಖ್ಯೆ ದಿನಾಂಕ:03-11-2023.<br>ಅಬಕಾರಿ ಆಯುಕ್ತರು, ಬೆಂಗಳೂರು ಇವರ ಆದೇಶ ದಿನಾಂಕ:19-04-2024 ರಂದು ಅಮಾನತ್ತು ತೆರವುಗೊಳಿಸಿ ಅಬಕಾರಿ ಉಪ ಆಯುಕ್ತರ ಕಛೇರಿ, ವಿಜಯನಗರ ಜಿಲ್ಲೆ ಇಲ್ಲಿಗೆ ತೈನಾತಿಸಿ ಆದೇಶಿಸಿದೆ.<br><br>ಪ್ರಕರಣ ಲೋಕಾಯುಕ್ತ ಹಂತದಲ್ಲಿ ಬಾಕಿ ಇರುತ್ತದೆ. |
| 24. | **(ಅಪರಾಧ ಸಂಖ್ಯೆ: 05/2022, ಕಲಂ 7(a) PC Act 1988 ರ** ಅಡಿಯಲ್ಲಿ ದಿನಾಂಕ 14-05-2022 ರಂದು ಪ್ರಕರಣ ದಾಖಲಿಸಿರುತ್ತದೆ).<br>**( ಸಿಎಲ್-7 ಸನ್ನದು ಮಂಜೂರಾತಿಗೆ ಸಂಬಂದಿಸಿದಂತೆ** | ಶ್ರೀಮತಿ ಶೈಲಜಾ ಪ್ರಭಾಕರ್ ರವರ ದೂರಿನನ್ವಯ, ಕೊಪ್ಪಳ ಎಸಿಬಿ ಪೊಲೀಸ್ ಠಾಣೆಯಲ್ಲಿ **ಅಪರಾಧ ಸಂಖ್ಯೆ: 05/2022, ಕಲಂ 7(a) PC Act 1988 ರ** ಅಡಿಯಲ್ಲಿ ದಿನಾಂಕ 14-05-2022 ರಂದು ಪ್ರಕರಣ ದಾಖಲಿಸಿರುತ್ತದೆ. ಲಂಚದ ಬೇಡಿಕೆಗೆ ಸಂಬಂಧಿಸಿದಂತೆ ಆರೋಪಿತ ಅಧಿಕಾರಿಯಾದ ಶ್ರೀಮತಿ ಸಿ. ಸೆಲೀನಾ |

| | | |
|---|---|---|
| | **ಲಂಚದ ಬೇಡಿಕೆ ಪ್ರಕರಣ ).**<br><br>**ಶ್ರೀಮತಿ ಸಿ. ಸೆಲೀನಾ, ಅಬಕಾರಿ ಉಪ ಆಯುಕ್ತರು, ಕೊಪ್ಪಳ ಜಿಲ್ಲೆ ಇವರ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳ, ಕೊಪ್ಪಳ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದ ಕುರಿತು.**<br>**ಪ್ರಕರಣದ ವಿವರ** | ರವರನ್ನು ದಿನಾಂಕ 14-05-2022 ರಂದು ದಸ್ತಗಿರಿ ಮಾಡಲಾಗಿದೆ.<br><br>ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ಹಾಗೂ ವಿಶೇಷ ನ್ಯಾಯಾಲಯ, ಕೊಪ್ಪಳವು ಆರೋಪಿತರಿಗೆ ದಿನಾಂಕ 15-05-2022 ರಿಂದ 27-05-2022 ರವರೆಗೆ ಒಟ್ಟು 13 ದಿನಗಳ ನ್ಯಾಯಾಂಗ ಬಂಧನ ವಿಧಿಸಿರುತ್ತೆ.<br>**ದಿನಾಂಕ:13-07-2004 ರಂದು ಸದರಿ ಅಧಿಕಾರಿ ಮರಣ ಹೊಂದಿರುತ್ತಾರೆ.**<br><br>ಪ್ರಕರಣ ಲೋಕಾಯುಕ್ತ ಹಂತದಲ್ಲಿ ಬಾಕಿ ಇರುತ್ತದೆ. |
| 25. | **ಕಡತ ಸಂಖ್ಯೆ: EXCISE-17011/16/2023.**<br><br>**(ದಾಖಲಿಸಿರುವ ಪ್ರ.ವ.ವ. ಸಂಖ್ಯೆ: ACB CR. NO. 6/2022, ದಿನಾಂಕ: 11-05-2022).**<br><br>ಆಪಾದಿತರ ಹೆಸರು: **ಶ್ರೀ ನಾಗಶಯನ**<br><br>ವಿಷಯ: ಭ್ರಷ್ಟಾಚಾರ ಆರೋಪದಡಿ ಶ್ರೀ ನಾಗಶಯನ ಅಬಕಾರಿ ಉಪ ಆಯುಕ್ತರು, & ಮೋಹಿಸಿನ್ ಪಾಷಾ , ಅಬಕಾರಿ ಹಿರಿಯ ವಾಹನ ಚಾಲಕ ಚಿತ್ರದುರ್ಗ ಜಿಲ್ಲೆ ಇವರನ್ನು ಎ/ಸಿ.ಬಿ ಅಧಿಕಾರಿಗಳು ದಸ್ತಗಿರಿ ಮಾಡಿರುವ ಬಗ್ಗೆ.<br><br>**15 ಮದ್ಯದ ಅಂಗಡಿಗಳ ನವೀಕರಣಕ್ಕಾಗಿ ಲಂಚದ ಬೇಡಿಕೆ ಆರೋಪ** | ಅಬಕಾರಿ ಜಂಟಿ ಆಯುಕ್ತರು (ಜಾರಿ ಮತ್ತು ತನಿಖೆ), ಹೊಸಪೇಟೆ ವಿಭಾಗ, ಹೊಸಪೇಟೆ ರವರ ಪತ್ರ ಸಂಖ್ಯೆ:ಜೆಸಿಇ/ಇಎಸ್‌ಟಿ/ಸಿಬ್ಬಂದಿ/06/2022-23, ದಿನಾಂಕ:11-05-2022.<br><br>ಸರ್ಕಾರದ ಪತ್ರ ಸಂಖ್ಯೆ:ಆಇ 47 ಇಪಿಎಸ್ 2022, ದಿನಾಂಕ:03-06-2022 ರಂದು ಭ್ರಷ್ಟಾಚಾರ ಆರೋಪದಡಿ ದಸ್ತಗಿರಿಮಾಡಿ ಇವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿರುತ್ತದೆ.<br><br>ಸರ್ಕಾರದ ಆದೇಶ ದಿನಾಂಕ:19-05-222 ರಂದು ಅಮಾನತ್ತುಗೊಳಿಸಿ ಯುನೈಟೆಡ್ ಸ್ಪಿರಿಟ್ಸ್ ಲಿ., ಕುಂಬಳಗೋಡು , ಶಯೋರಾ ಆರ್ಚರ್ಡ್ಸ್ ಬೆಂಗಳೂರು ಇಲ್ಲಿಗೆ ವರ್ಗಾಯಿಸಿ ಆದೇಶಿಸಿದೆ.<br><br>ಮಾನ್ಯ ಕೆ.ಎ.ಟಿ. ದಿನಾಂಕ:03-02-2023 ರ ಅಮಾನತ್ತು ಆದೇಶವನ್ನು ರದ್ದುಗೊಳಿಸಿ ಮಾಡಿರುವ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿರುತ್ತಾರೆ.<br><br>ಶ್ರೀ ನಾಗಶಯನ, ಅಂದಿನ ಅಬಕಾರಿ ಉಪ ಆಯುಕ್ತರು, ಚಿತ್ರದುರ್ಗ ಜಿಲ್ಲೆ ಇವರು ಮಾನ್ಯ ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ ಇವರು ಭ್ರಷ್ಟಚಾರ **ಆರೋಪದಡಿ ದಾಖಲಿಸಿರುವ ಪ್ರ.ವ.ವ. ಸಂಖ್ಯೆ: ACB CR. NO.6/2022 ನ್ನು** ಪ್ರಶ್ನಿಸಿ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ CrlP No.4807/2022 ನ್ನು ದಾಖಲಿಸಿರುತ್ತಾರೆ. ಮಾನ್ಯ |

| | | |
|---|---|---|
| | | ಉಚ್ಚ ನ್ಯಾಯಾಲಯದ ಆದೇಶ ಸಂಖ್ಯೆ CrlP No.4807/2022, 16/05/2023 ರಲ್ಲಿ ಮಾನ್ಯ ಲೋಕಾಯುಕ್ತ ರವರು ದಾಖಲು ಮಾಡಿರುವ ಪ್ರ.ವ.ವ ನ್ನು ವಜಾಗೊಳಿಸಿ ಆದೇಶಿಸಿರುತ್ತದೆ.<br><br>ತದನಂತರ, ದೂರುದಾರರಾದ ಶ್ರೀ ಬಾಬು ರೆಡ್ಡಿ ರವರು ಮಾನ್ಯ ಸರ್ವೋಚ್ಚ ನ್ಯಾಯಾಲಯ, ನವದೆಹಲಿ ಇಲ್ಲಿ SLP (Crl) No.1931/2024 (II-C) ನ್ನು ದಾಖಲಿಸಿರುತ್ತಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಶ್ರೀ ಬಾಬು ರೆಡ್ಡಿ ರವರು ದಾಖಲು ಮಾಡಿರುವ SLP (Crl) No.1931/2024 (II-C) ನ್ನು ದಿನಾಂಕ:30-04-2024 ರಲ್ಲಿ ವಜಾಗೊಳಿಸಿ ಆದೇಶಿಸಿರುತ್ತದೆ.<br><br>**ಹಾಲಿ ಪ್ರಕರಣ ಲೋಕಾಯುಕ್ತ ಹಂತದಲ್ಲಿ ವಿಚಾರಣೆಯಲ್ಲಿದೆ.**<br><br>**ಮೋಹಿಸಿನ್ ಪಾಷಾ, ಹಿರಿಯ ವಾಹನ ಚಾಲಕ**<br>ಅಬಕಾರಿ ಆಯುಕ್ತರು ಹಾಗೂ ಶಿಸ್ತು ಪ್ರಾಧಿಕಾರಿಗಳು, ಬೆಂಗಳೂರು ರವರ ಆದೇಶ ದಿನಾಂಕ:17-09-2022 ರಂದು ಅಮಾನಯತ್ತುಗೊಳಿಸಿ ದಾವಣಗೆರೆ ಜಿಲ್ಲೆ ಹರಿಹರ ಇಲ್ಲಿ ಖಾಲಿ ಇರುವ ಅಬಕಾರಿ ವಾಹನ ಚಾಲಕರ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿರುತ್ತಾರೆ.<br><br>**ಪ್ರಕರಣ ಲೋಕಾಯುಕ್ತ ಹಂತದಲ್ಲಿ ಬಾಕಿ ಇರುತ್ತದೆ.** |

**ಆಇ 19 ಇಎಲ್‌ಕ್ಯೂ 2026**